ವಿಜಯಪುರ | ಸಂಪುಟ 01 | ಸಂಚಿಕೆ 229 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶುಕ್ರವಾರ, ನವೆಂಬರ್ 3, 2023

“ದೇಶದ ಉಜ್ವಲ ಭವಿಷ್ಯದ ಹಿತದೃಷ್ಟಿಯಿಂದ ಹಿಂದೆ ಏನು ಅಭಿವೃದ್ಧಿ ಮಾಡಿದ್ದೇವೆ, ಮುಂದೆ ಏನೆಲ್ಲ ಮಾಡಬೇಕು ಎಂಬ ಬಗ್ಗೆ ಚಿಂತನೆ ಮಾಡಿ ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಹೆಜ್ಜೆಗಳನ್ನು ಇಟ್ಟಲ್ಲಿ ನಮ್ಮ ರಾಜ್ಯ ವಿಶ್ವದಲ್ಲೇ ತಲೆ ಎತ್ತಿ ನಿಲ್ಲಲಿದೆ.”

– ಸಿ.ಎಸ್.ನಾಡಗೌಡ ಅಪ್ಪಾಜಿ
ಶಾಸಕರು, ಮುದ್ದೇಬಿಹಾಳ




ಜನತಾ ದರ್ಶನದ ಮೂಲಕ ಸಮಸ್ಯೆಗಳಿಗೆ ಪರಿಹಾರ । ನೀರಿನ ಸಮಸ್ಯೆ ನಿವಾರಣೆಯಲ್ಲಿ ಲೋಪವಾದರೆ ಅಧಿಕಾರಿಗಳ ಮೇಲೆ ಕ್ರಮ

# ಬರ: ಕುಡಿವ ನೀರು ಪೂರೈಕೆಗೆ ಪ್ರಥಮಾದ್ಯತೆ

## ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಚಿವ ಎಂ.ಬಿ.ಪಾಟೀಲ ಸ್ಪಷ್ಟನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಇರುವ ಹಿನ್ನಲೆಯಲ್ಲಿ ಕುಡಿಯುವ ನೀರಿಗೆ ಪ್ರಥಮಾದ್ಯತೆ ನೀಡಬೇಕು. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಗಂಭೀರವಾಗಿ ತೆಗೆದುಕೊಳ್ಳಬೇಕು. ನೀರಿನ ವಿಷಯದಲ್ಲಿ ಯಾವುದೇ ನೆಪ ಸಹಿಸುವುದಿಲ್ಲ. ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಲ್ಲಿ ಲೋಪ ಕಂಡು ಬಂದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ಕ್ರಮ ವಹಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಗುರುವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಆಯೋಜಿಸಲಾದ ಜನತಾ ದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಚಿವರು, ನೀರಿನ ಸಮಸ್ಯೆವಿದ್ದೆಡೆ ಬೊರವೆಲ್‌ಗಳನ್ನು ಕೊರೆಯಿಸಲು ಕ್ರಮ ವಹಿಸಬೇಕು. ಬೊರವೆಲ್ ಕೊರೆಸುವ ಪ್ರಕ್ರಿಯೆ ವಿಳಂಬವಾಗುತ್ತಿದ್ದರೆ, ತ್ವರಿತವಾಗಿ ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮ ವಹಿಸಿ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಗ್ರಾಮೀಣ ಭಾಗದಲ್ಲಿ ತಾಲೂಕಾ ಮಟ್ಟದ ಟಾಸ್ಕಪೋರ್ಸ್ ಸಭೆ ನಡೆಸಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಬರಗಾಲದಂತಹ ಕ್ಲೀಷ್ಟಕರ ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯುವ ನೀರು, ವಿದ್ಯುತ್, ಉದ್ಯೋಗದ ಕೊರತೆಯಾಗದಂತೆ ನಿಗಾ ವಹಿಸಬೇಕು. ಸಮರ್ಪಕವಾಗಿ ವಿದ್ಯುತ್ ಪೂರೈಸಬೇಕು. ಗ್ರಾಮೀಣ ಭಾಗದಲ್ಲಿ ನರೇಗಾ ಯೋಜನೆಯಡಿ ಸ್ಥಳೀಯವಾಗಿ ಕೆಲಸ ಒದಗಿಸುವ ಮೂಲಕ ಜನರ ಬದುಕಿಗೆ ಆಸರೆ ಒದಗಿಸಬೇಕು ಎಂದು ಹೇಳಿದರು.




ಈ ಬರಗಾಲದ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಜನತಾ ದರ್ಶನ ಕಾರ್ಯಕ್ರಮದ ಮೂಲಕ ಜನರ ಸಮಸ್ಯೆಗಳಿಗೆ ಪರಿಹಾರ ದೊರೆಯಬೇಕು. ಜನರ ಕುಂದು ಕೊರತೆಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಿ, ಪರಿಹಾರ ಒದಗಿಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಪೂರ್ವಸಿದ್ಧತೆ ಮಾಡಿಕೊಂಡಿರಬೇಕು. ಈ ಕಾರ್ಯಕ್ರಮಗಳ ಮೂಲಕ ಹೆಚ್ಚಿನ ಜನರ ಸಮಸ್ಯೆಗಳಿಗೆ ಪರಿಹಾರ ದೊರೆಯುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು. ಗ್ರಾಮೀಣ ಮಟ್ಟದ ಜನರ ಸಮಸ್ಯೆಗಳ ಆಲಿಕೆಗೆ ತಾಲೂಕಾ ಮಟ್ಟದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಸ್ಥಳೀಯ ಶಾಸಕರೊಂದಿಗೆ ಜನತಾ ದರ್ಶನ ಏರ್ಪಡಿಸಬೇಕು. ಇದರಿಂದ ಸಾಕಷ್ಟು ಜನರ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ. ಜನರ ಸಮಸ್ಯೆಗೆ ಪರಿಹಾರ ದೊರೆತಾಗ ಜನತಾದರ್ಶನ ಕಾರ್ಯಕ್ರಮ ಅರ್ಥಪೂರ್ಣವಾಗುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಮಾತನಾಡಿ,ಸೆಪ್ಟಂಬರ್ 25 ರಂದು ನಡೆದ ಮೊದಲನೇ ಜನತಾ ದರ್ಶನ ಕಾರ್ಯಕ್ರಮದಲ್ಲಿ 709 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅದರಲ್ಲಿ 563 ಅರ್ಜಿಗಳನ್ನು ಒಂದು ತಿಂಗಳೊಳಗಾಗಿ ವಿಲೇವಾರಿ ಮಾಡಲಾಗಿದೆ. 140 ಅರ್ಜಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಬಾಕಿ ಇದ್ದು, ಶೀಘ್ರದಲ್ಲೇ ಇತ್ಯರ್ಥಗೊಳ್ಳಲಿವೆ. ಈ ಅರ್ಜಿಗಳಿಗೆ ಸಂಬಧಿಸಿದಂತೆ 177 ಅರ್ಜಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿದ್ದು, ಈ ಅರ್ಜಿಗಳ ಪೈಕಿ 145 ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೋಲಿಸ್ ಇಲಾಖೆ, ಹೆಸ್ಕಾಂ ಇಲಾಖೆಯ ಹೆಚ್ಚಿನ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಬಾಕಿ ಅರ್ಜಿಗಳ ವಿಲೇವಾರಿಗಾಗಿ ಸಂಬಂಧಿಸಿದ ಇಲಾಖೆಗಳೊಂದಿಗೆ ಸಭೆ ನಡೆಸಿ ಪರಿಶೀಲನೆ ಮಾಡಿ ಆದ್ಯತಾನುಸಾರ ವಿಲೇವಾರಿಗೆ ಕ್ರಮ ವಹಿಸಲಾಗಿದೆ ಎಂದು ಹೇಳಿದರು.

ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಸಲ್ಲಿಕೆಯಾದ ವಿಜಯಪುರ ನಗರದ ಕುಡಿಯುವ ನೀರಿನ ಸಮಸ್ಯೆ, ಬೆಳೆ ಹಾನಿ, ವಿಕಲಚೇತರನಿಗೆ ಆಶ್ರಯ ಮನೆ, ಕೃಷಿ ಹೊಂಡ ನಿರ್ಮಾಣ, ಭೂದಾಖಲೆಗಳ ಸಮಸ್ಯೆ, ಕಾಲುವೆಗೆ ನೀರು ಹರಿಸುವಿಕೆ, ವಿದ್ಯುತ್, ಬಸ್ಸಿನ ವ್ಯವಸ್ಥೆ, ಕಂದಾಯ ಇಲಾಖೆಗೆ ಸಂಬಂಧಿಸಿದ ದೂರುಗಳು, ಆಸ್ತಿ ನೊಂದಣಿ ಸೇರಿದಂತೆ ವಿವಿಧ ಇಲಾಖೆಗೆ ಸಂಬಂಧಿಸಿದ ಅಹವಾಲುಗಳನ್ನು ಸಾರ್ವಜನಿಕರಿಂದ ಸ್ವೀಕರಿಸಿ, ಪರಿಹಾರಕ್ಕೆ ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾರ್ಯಕ್ರಮದಲ್ಲಿ ನಾಗಠಾಣ ಶಾಸಕರಾದ ವಿಠ್ಠಲ ಕಟಕದೊಂಡ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಸರ್ಕಾರದ ಕಾರ್ಯದರ್ಶಿಗಳಾದ ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ರಿಚರ್ಡ್ ವಿನ್ಸೆಂಟ್ ಡಿಸೋಜ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ, ಅಪರ ಜಿಲ್ಲಾಧಿಕಾರಿ ಮಹಾದೇವ ಮುರಗಿ, ವಿಜಯಪುರ ಉಪವಿಭಾಗಾಧಿಕಾರಿ ಬಸವಣ್ಣೆಪ್ಪ ಕಲ್ಲಶೆಟ್ಟಿ, ಇಂಡಿ ಉಪವಿಭಾಗಾಧಿಕಾರಿ ಆಬೀದ ಗದ್ಯಾಳ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

## ಜನತಾ ದರ್ಶನದಲ್ಲಿ 628 ಅರ್ಜಿಗಳ ಸ್ವೀಕಾರ



ವಿಜಯಪುರ: ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಅತಿ ಹೆಚ್ಚಿನ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ 310 ಅರ್ಜಿಗಳು ಸೇರಿದಂತೆ ಒಟ್ಟು 628 ಅರ್ಜಿಗಳು ಸ್ವೀಕೃತವಾಗಿವೆ.


ಕಾರ್ಯಕ್ರಮದಲ್ಲಿ ಸಲ್ಲಿಕೆಯಾದ ಅರ್ಜಿಗಳ ಇಲಾಖಾವಾರು ವಿವರದಂತೆ ಕಂದಾಯ ಇಲಾಖೆಯ 310, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ –04, ಆಲಮಟ್ಟಿ ವಿಶೇಷ ಭೂಸ್ವಾಧೀನಾಧಿಕಾರಿ–09, ಕೆಬಿಜೆಎನ್‌ಎಲ್ ಆಲಮಟ್ಟಿ–10, ಆಲಮಟ್ಟಿ ಪುನರ್‌ವಸತಿ (ಆರ್.ಓ)–08, ಮಹಾನಗರ ಪಾಲಿಕೆ 74, ನೀರು ಸರಬರಾಜು ಮಂಡಳಿ–14, ನಗರಾಭಿವೃದ್ಧಿ ಪ್ರಾಧಿಕಾರ–02, ಹೆಸ್ಕಾಂ–23, ನಗರಾಭಿವೃದ್ಧಿ ಕೋಶ–08, ಕೊಳಚೆ ನಿರ್ಮೂಲನಾ ಮಂಡಳಿ–05, ಜಿಲ್ಲಾ ಪಂಚಾಯತ್–58, ಸಮಾಜ ಕಲ್ಯಾಣ ಇಲಾಖೆ –03, ಹಿಂದುಳಿದ ವರ್ಗಗಳ ಇಲಾಖೆ–07, ಅಲ್ಪಸಂಖ್ಯಾತರ ಇಲಾಖೆ –02, ಶಿಶು ಅಭಿವೃದ್ಧಿ ಯೋಜನಾಧಿಕಾರಿ–01, ಶಿಕ್ಷಣ ಇಲಾಖೆ–20, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ–05, ಕೃಷಿ ಇಲಾಖೆ–06, ತೋಟಗಾರಿಕೆ–ರೇಷ್ಮೆ–02, ಆರೋಗ್ಯ ಇಲಾಖೆ–13, ಕಾರ್ಮಿಕ ಇಲಾಖೆ–01, ಸಣ್ಣ ನೀರಾವರಿ–09, ಕೆಕೆಆರ್‌ಟಿಸಿ–09, ಪಶುಸಂಗೋಪನಾ ಇಲಾಖೆ–01, ಹೌಸಿಂಗ್ ಬೋರ್ಡ್–01, ಪೋಲಿಸ್ ಇಲಾಖೆ–16, ಅಗ್ನಿಶಾಮಕ ಇಲಾಖೆ–01, ಅಬಕಾರಿ ಇಲಾಖೆ–01, ಹಿರಿಯ ನಾಗರೀಕರ ಸಬಲೀಕರಣ ಇಲಾಖೆ–04 ಹಾಗೂ ಸಹಕಾರ ಇಲಾಖೆ –01 ಸೇರಿದಂತೆ ಒಟ್ಟು ವಿವಿಧ ಇಲಾಖೆಯ 628 ಅರ್ಜಿಗಳು ಸ್ವೀಕೃತವಾಗಿವೆ.

### ರಾಜ ನುಡಿ

ಈ ಪ್ರಪಂಚದಲ್ಲಿ ನಿಷ್ಕಲ್ಮಶವಾದದ್ದಿದೆ ಮತ್ತು ನಿಷ್ಕಲ್ಮಶವಾಗಿರಲೂ ಸಾಧ್ಯವಿದೆ ಎಂದು ತೋರಿಸುವುದಕ್ಕೊಸ್ಕರ ಮಕ್ಕಳನ್ನು ಸೃಷ್ಟಿ ಮಾಡಿ ದೇವರು ನಮ್ಮ ಮುಂದಿರಿಸಿದ್ದಾನೆ.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 225



**ಸೃಷ್ಟಿಯ ಉಗಮದ ಕುರಿತ ವೈಜ್ಞಾನಿಕ ಮನೋಭಾವ**

*ಆದಿ ಅನಾದಿ ಅಂತ್ಯವೆಂದು ನುಡಿದಾಡುವರಲ್ಲದೆ,*
*ಇವರ ಭೇದಾದಿ ಭೇದವನಾರೂ ಅರಿಯರು.*
*ಆದಿಯಿಂದತ್ತತ್ತಲಾರು ಬಲ್ಲರು?*
*ಅನಾದಿಯಿಂದತ್ತತ್ತಲಾರು ಬಲ್ಲರು?*
*ಸಾಧಕರಿಗಳವಲ್ಲ. ವೇದ, ಶಾಸ್ತ್ರ, ಆಗಮ ಪುರಾಣಂಗಳು ಕಾಣದೆಹೋದವು.*
*ಅದು ಹೇಗೆಂದರೆ, ಆದಿ ಕೂರ್ಮ ಕರಿ ಸರ್ಪ ಹೊತ್ತಿಪ್ಪವೆಂಬರು.*
*ಅವನಾಗುವ ಮಾಡಿ, ಅವಕ್ಕೆ ಆದಿಯಾಗಿಪ್ಪವರಾರೆಂದು ಅರಿಯರು.*
*ಅನಾದಿಯೆಂಬ ಆಕಾಶದ ಮೇಲೆ,*
*ದಿಕ್ಪಾಲಕರು, ದೇವರ್ಕಳು, ರುದ್ರ, ಶಿವ, ಸದಾಶಿವ ಉಂಟೆಂಬರು.*
*ಅವರನಾಗುವ ಮಾಡಿ, ಅವರ ನಿಲಿಸಿಕೊಂಡಿಪ್ಪವರಾರೆಂದು ಅರಿಯರು.*
*ಇಂತೀ ಅಜಾಂಡ ಬ್ರಹ್ಮಾಂಡವೆಲ್ಲವು*
*ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ[ಕುಕ್ಷಿ]ಯೊಳು ಇಪ್ಪವು ಕಾಣಿರೊ.*

*– ಹಡಪದ ಅಪ್ಪಣ್ಣನವರು*

ಈ ವಚನದಲ್ಲಿ ಹಡಪದ ಅಪ್ಪಣ್ಣನವರು ಸೃಷ್ಠಿಯ ಉಗಮದ ಬಗ್ಗೆ ವೈಜ್ಞಾನಿಕವಾಗಿ ಚಿಂತಿಸುತ್ತ, ಅಂದು ಈ ವಿಷಯದ ಕುರಿತು ಜಾರಿಯಲ್ಲಿದ್ದ (ಮೂಢ)ನಂಬಿಕೆಯನ್ನು ಪ್ರಶ್ನಿಸುವ ಎದೆಗಾರಿಕೆಯನ್ನು ಪ್ರದರ್ಶಿಸಿದ್ದಾರೆ. ಆದಿ ಅನಾದಿ ಅಂತ್ಯವೆಂದು ನುಡಿದಾಡುವರಲ್ಲದೆ, ಇವರ ಭೇದಾದಿ ಭೇದವನಾರೂ ಅರಿಯರು. ಎಂದು ಹೇಳುವುದರೊಂದಿಗೆ ಶರಣರೆಲ್ಲರೂ ಸೃಷ್ಟಿಯ ಉಗಮದ ಬಗ್ಗೆ ವೈಜ್ಞಾನಿಕವಾಗಿ ಚಿಂತಿಸೋಣ ಎಂದು ಕರೆಕೊಟ್ಟಿದ್ದಾರೆ. ಮುಂದುವರೆದು ಆದಿ ಅನಾದಿಯಿಂದ ಅತ್ತ ಎನಿತ್ತು ಎಂದು ಸರಿಯಾಗಿ ತಿಳಿದುಕೊಳ್ಳಲು ಯಾರು (ವೇದ, ಶಾಸ್ತ್ರ, ಆಗಮ ಪುರಾಣಂಗಳು ಕಾಣದೆಹೋದವು.)ಪ್ರಯತ್ನಿಸಿಲ್ಲ ಎಂದು ಕೊರಗಿದ್ದಾರೆ, ಮೌಢ್ಯತೆಯ ಆಧಾರದ ಮೇಲೆ ಆದಿಯನ್ನು ಕೂರ್ಮ ಕರಿ ಸರ್ಪ ಹೊತ್ತಿಪ್ಪವೆಂಬರು. ಹಾಗೂ ಅನಾದಿಯೆಂಬ ಆಕಾಶದ ಮೇಲೆ, ದಿಕ್ಪಾಲಕರು, ದೇವರ್ಕಳು, ರುದ್ರ, ಶಿವ, ಸದಾಶಿವ ಉಂಟೆಂಬರು ಎಂದು ನಂಬಿದವರನ್ನು ಪ್ರಶ್ನಿಸುತ್ತ ಈ ಆದಿ ಅನಾದಿಗಳನ್ನು ನಿಲಿಸಿಕೊಂಡವರು ಯಾರು ಎಂಬುದನ್ನು ಬಲ್ಲಿರೇನು? ಎಂದು ಪ್ರಶ್ನಿಸುತ್ತ, ಇಂತೀ ಅಜಾಂಡ ಬ್ರಹ್ಮಾಂಡವೆಲ್ಲವು ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ[ಕುಕ್ಷಿ]ಯೊಳು ಇಪ್ಪವು ಕಾಣಿರೊ. ಎನ್ನುವ ಮೂಲಕ ಅಂದಿನ ವಚನಕಾರರು ಸೃಷ್ಟಿಯ ಉಗಮದ ಬಗ್ಗೆ ವೈಜ್ಞಾನಿಕ ಮನೋಭಾವ ತಾಳಿದ್ದರು ಎಂಬುದನ್ನು ಹಡಪದ ಅಪ್ಪಣ್ಣನವರು ಈ ವಚನದಲ್ಲಿ ಸೆರೆಹಿಡಿದಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

ತಾಜಪುರ (ಎಚ್)ದಲ್ಲಿ ಟಿಪ್ಪು ಸುಲ್ತಾನ್ ಸರ್ಕಲ್ ಉದ್ಘಾಟಿಸಿದ ಸಚಿವ ಎಂ.ಬಿ.ಪಾಟೀಲ ಅಭಿಮತ

# ರಾಜಕೀಯಕ್ಕಾಗಿ ಬಿಜೆಪಿ ಟಿಪ್ಪು ವಿರುದ್ಧ ಅಪಪ್ರಚಾರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಪ್ರತಿಯೊಂದು ಗ್ರಾಮಗಳು ಬಸವಣ್ಣನವರ ಅನುಭವ ಮಂಟಪದ ರೀತಿ ಇರಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದ್ದಾರೆ.

ಬುಧವಾರ ರಾತ್ರಿ ತಿಕೋಟಾ ತಾಲೂಕಿನ ತಾಜಪುರ ಎಚ್. ಗ್ರಾಮದಲ್ಲಿ ನಡೆದ ಹಜರತ್ ಟಿಪ್ಪು ಸುಲ್ತಾನ್ ಸರ್ಕಲ್ ಉದ್ಘಾಟಿಸಿ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬಸವತತ್ವದಡಿ ಗ್ರಾಮಗಳಲ್ಲಿ ಎಲ್ಲ ಜಾತಿ ಮತ್ತು ಧರ್ಮದ ಜನರು ಸುಖ, ಸಂತೋಷದಿಂದ ಬದುಕಬೇಕು. ರಾಜಕೀಯದವರು ಬಂದು ಜಗಳ ಹಚ್ಚುತ್ತಾರೆ. ಆದರೆ, ತಾವು ಪ್ರತಿದಿನ ಒಬ್ಬರ ಮುಖವನ್ನೊಬ್ಬರು ನೋಡಲೇಬೇಕು. ಈ ಹಿನ್ನೆಲೆಯಲ್ಲಿ ಪರಸ್ಪರ ಪ್ರೀತಿ ಮತ್ತು ವಿಶ್ವಾಸದಿಂದ ಜೀವನ ಸಾಗಿಸಬೇಕು ಎಂದು ಅವರು ಹೇಳಿದರು.

ತಾಜಪುರ ಎಚ್. ಗ್ರಾಮದಲ್ಲಿ ಬಹಳ ದಿನಗಳ ಬೇಡಿಕೆ ಈಗ ಸುಸಜ್ಜಿತ ಟಿಪ್ಪು ಸುಲ್ತಾನ್ ಸರ್ಕಲ್ ನಿರ್ಮಾಣದೊಂದಿಗೆ ಈಡೇರಿದೆ. ಕನ್ನಡ ರಾಜ್ಯೋತ್ಸವ ದಿನದಂದು ಸರ್ಕಲ್ ಉದ್ಘಾಟಿಸಿದ್ದೇವೆ. ಟಿಪ್ಪು ಸುಲ್ತಾನ ಬಗ್ಗೆ ರಾಜ್ಯದಲ್ಲಿ ಅನೇಕ ಗೊಂದಲಗಳನ್ನು ಸೃಷ್ಟಿಸಲಾಗಿದೆ. ಟಿಪ್ಪು ಸುಲ್ತಾನರು ಮೈಸೂರು ಹುಲಿಯಾಗಿ ಬ್ರಿಟೀಷರ ವಿರುದ್ಧ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಹೋರಾಟ ಮಾಡಿದ್ದಾರೆ. ಆದರೆ, ಬಿಜೆಪಿಯ ಮಾಜಿ ಸಿಎಂ ಗಳು ಸೇರಿದಂತೆ ಕೆಲವು ಜನ ನಾಯಕರು ಕಳೆದ ಐದು ವರ್ಷಗಳಲ್ಲಿ ಟಿಪ್ಪು ಸುಲ್ತಾನ ಮುಸ್ಲಿಮರ ಅರಸ. ಆತ ಓರ್ವ ಮತಾಂಧ ಎಂದು ಹೇಳುತ್ತ ಹಿಂದೂ ಮತ್ತು ಮುಸ್ಲಿಮರನ್ನು ವಿಭಜಿಸಲು ಅಪಪ್ರಚಾರ ಮಾಡಿದ್ದಾರೆ. ಆದರೆ, ಬಿಜೆಪಿಯ ಸರಕಾರ ಅಧಿಕಾರಕ್ಕೆ ಬರುವುದಕ್ಕೂ ಮುಂಚೆ ಇದೇ ನಾಯಕರು ಟಿಪ್ಪು ಸುಲ್ತಾನರ ಟೋಪಿ ಹಾಕಿಕೊಂಡು ಫೋಟೋ ತೆಗೆಸಿಕೊಂಡಿದ್ದಾರೆ ಎಂದು ಅವರು ಹೇಳಿದರು.



ಬ್ರಿಟೀಷರ ಕಾಲದಲ್ಲಿ ಟಿಪ್ಪು ಸುಲ್ತಾನ ಮೈಸೂರು ಭಾಗದಲ್ಲಿ ಅನೇಕ ಹಿಂದು ದೇವಸ್ಥಾನಗಳಿಗೆ ಜಾಗ ನೀಡಿ ಅನುದಾನ ಕೊಟ್ಟಿದ್ದಾರೆ. ಇದು ಬಿಜೆಪಿಯವರಿಗೂ ಗೊತ್ತಿದೆ. ಆದರೂ ರಾಜಕೀಯಕ್ಕಾಗಿ ಹಿಂದೂ–ಮುಸ್ಲಿಮರ ಮತಗಳ ವಿಭಜನೆಗಾಗಿ ಟಿಪ್ಪುವಿನ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಸಚಿವರು ಹೇಳಿದರು.

ತಾಜಪುರ ಗ್ರಾಮದಲ್ಲಿ ಎಲ್ಲ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದೇನೆ. ಬಾಕಿ ಕೆಲಸಗಳನ್ನು ಮಾಡುತ್ತೇನೆ. ರಾಜ್ಯದಲ್ಲಿ ಭೀಕರ ಬರ ಎದುರಾಗಿದೆ. ಇಡೀ ರಾಜ್ಯ ಬರದಿಂದ ತತ್ತರಿಸಿದೆ. ಇನ್ನೆರಡು ದಿನಗಳಲ್ಲಿ ತಿಕೋಟಾ ತಾಲೂಕು ಕೂಡ ಬರ ಪೀಡಿತ ಎಂದು ಘೋಷಣೆಯಾಗಲಿದೆ. ಇಂಥ ಪರಿಸ್ಥಿತಿಯಲ್ಲಿಯೂ ವಿಜಯಪುರ ಜಿಲ್ಲೆಯಲ್ಲಿ ಮಾತ್ರ ನೀರಾವರಿ ಯೋಜನೆಗಳಿಂದಾಗಿ ಕಾಲುವೆಗಳಲ್ಲಿ ನೀರು ಹರಿಯುತ್ತಿದೆ. ಹೀಗಾಗಿ ಬರದ ಪ್ರಭಾವ ಅಷ್ಟೊಂದು ಪ್ರಮಾಣದಲ್ಲಿ ಅನುಭವಕ್ಕೆ ಬರುತ್ತಿಲ್ಲ. ನೀರಾವರಿಗೂ ಮುಂಚೆ ಈ ಸಮಯದಲ್ಲಿ ರೈತರು ನೀರಿಗಾಗಿ 700 ಟ್ಯಾಂಕರುಗಳನ್ನು ಬಳಸುತ್ತಿದ್ದರು. ಈ ಬಾರಿ ಇಡೀ ಜಿಲ್ಲೆಯಲ್ಲಿ ಕೇವಲ ಏಳು ಟ್ಯಾಂಕರುಗಳನ್ನು ಮಾತ್ರ ಬಳಸಲಾಗುತ್ತಿದೆ. ಒಂದು ವೇಳೆ ನಾವು ನೀರಾವರಿ ಮಾಡಿ ಅಂತರ್ಜಲ ಹೆಚ್ಚಿಸದಿದ್ದರೆ ಇಂದು 2000 ಟ್ಯಾಂಕರ್‌ಗಳನ್ನು ಬಳಸಬೇಕಾಗುತ್ತಿತ್ತು. ಇದನ್ನು ಎಲ್ಲರೂ ತಿಳಿದುಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

ಅಭಿವೃದ್ಧಿಗೆ ಶಾಶ್ವತ ಕೆಲಸಗಳು ಬಹುಮುಖ್ಯವಾಗಿವೆ. ನೀರಾವರಿ ಮೂಲಕ ರೈತರನ್ನು ಶ್ರೀಮಂತರನ್ನಾಗಿ ಮಾಡಿದ್ದೇವೆ. ಹೊಲಗಾಲುವೆ ಕೆಲಸ ಪೂರ್ಣಗೊಳಿಸಲಾಗುವುದು. ಹೀಗಾಗಿ ಯಾರೂ ಜಮೀನುಗಳನ್ನು ಮಾರಿಕೊಳ್ಳಬೇಡಿ. ಮುಂಬರುವ ದಿನಗಳಲ್ಲಿ ಪ್ರತಿ ಎಕರೆ ಜಮೀನಿನ ಬೆಲೆ ರೂ. 50 ಲಕ್ಷಕ್ಕೆ ಹೆಚ್ಚಳವಾಗಲಿದೆ. ಪ್ರತಿ ಎಕರೆ ಜಮೀನಿನಲ್ಲಿ ಕೇವಲ ರೂ. 5 ರಿಂದ 10 ಸಾವಿರ ಸಿಗುತ್ತಿದ್ದ ಉತ್ಪನ್ನ ಈಗ ರೂ. 1 ಲಕ್ಷಕ್ಕೇರಿದೆ. ನಿಮ್ಮ ಮಕ್ಕಳು ಮೊಮ್ಮಕ್ಕಳ ಮುಂದಿನ ಸಾವಿರಾರು ವರ್ಷಗಳ ಭವಿಷ್ಯ ಉತ್ತಮವಾಗಿಸುವ ಕೆಲಸ ಮಾಡಿಕೊಟ್ಟಿದ್ದೇನೆ. ಈ ಮೂಲಕ ನಿಮ್ಮ ಉಪಕಾರ ತೀರಿಸುವ ಪ್ರಯತ್ನ ಮಾಡಿದ್ದೇನೆ. ಶಾಶ್ವತ ನೀರಾವರಿ ಯೋಜನೆಗಳಿದ್ದರೆ ಯುವಕರು ಕೃಷಿ ಕಡೆಗೆ ಆಕರ್ಷಿತರಾಗುತ್ತಾರೆ. ಈಗ ನೀರಾವರಿ ಯೋಜನೆಗಳ ಜಾರಿಯಿಂದಾಗಿ ಯುವಕರು ಮತ್ತೆ ಕೃಷಿಗೆ ಮರಳುವಂತಾಗಿದೆ. ನೀರಿಲ್ಲದೆ ಬದುಕುವುದು ಬಹಳ ಕಷ್ಟ. ಆ ಕಷ್ಟದ ದಿನಗಳನ್ನು ದೂರ ಮಾಡಿದ್ದೇವೆ ಎಂದು ಎಂ. ಬಿ. ಪಾಟೀಲ ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಆರ್. ಜಿ. ಯರನಾಳ, ಯಾಕೂಬ್ ಜತ್ತಿ, ಮಡ್ಡಿಸಿದ್ದ ಕುಮಟಗಿ, ಜಕ್ಕಪ್ಪ ಯಡವೇ, ಅನೀಲ ಹಿರೇಮಠ, ಶಂಕರಯ್ಯ ಶಾಸ್ತ್ರಿ, ಮಡಿಸಿದ್ದ ಕುಮಟಗಿ, ಶ್ರೀಶೈಲ ಹಾಲಳ್ಳಿ, ಪರಮೇಶ್ ಕಲಬೀಳಗಿ, ಗುರುರಾಜ ಸಾವಳಸಂಗ್, ಗೌಸಪೀರ್ ಮೊಕಾಶಿ, ಶಂಶುದ್ದೀನ್ ಮುಜಾವರ, ರಂಜಾನ್ ತಿಡಗುಂಡಿ, ಆಕೀಬ್ ತಿಡಗುಂದಿ, ಶರೀಪ್ ಸಗರ್, ಅಷ್ಪಾಕ್ ಮೊಕಾಶಿ, ಶೋಹೆಲ್ ಮೊಕಾಶಿ ಮುಂತಾದವರು ಉಪಸ್ಥಿತರಿದ್ದರು.

ಇಂಡಿಯ ಸರಕಾರಿ ಆಸ್ಪತ್ರೆಯಲ್ಲಿ ಮಹಿಳೆ ನಿಧನ ಪ್ರಕರಣ

## ವಿಚಾರಣೆಗೆ ತನಿಖಾ ತಂಡ ರಚನೆ :ಜಿಪಂ ಸಿಇಒ ಶಿಂಧೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಇಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನ.01 ರಂದು ನಿಧನ ಹೊಂದಿದ ಮಹಿಳೆ ಸಾವಿನ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ತನಿಖಾ ತಂಡವನ್ನು ರಚಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ತಿಳಿಸಿದ್ದಾರೆ.

ಇಂಡಿ ಆಸ್ಪತ್ರೆಯಲ್ಲಿ ಡಯಾಲಸಿಸ್ ಚಿಕಿತ್ಸೆಗಾಗಿ ಒಳರೋಗಿಯಾಗಿ ದಾಖಲಾಗಿದ್ದ 35 ವರ್ಷ ವಯಸ್ಸಿನ ಶ್ರೀಮತಿ ಬಿಸ್ಮಿಲ್ಲಾ ಸೈಪನಸಾಬ ನದಾಫ್ ಸಾವಿನ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅವರ ನೇತೃತ್ವದಲ್ಲಿ, ಜಿಲ್ಲಾ ಶಸ್ತ್ರ ಚಿಕಿತ್ಸಕ, ನೆಫ್ರೋಲಾಜಿಸ್ಟ್ ಫಿಜಿಶಿಯನ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ಸಹಾಯಕ ಆಡಳಿತಾಧಿಕಾರಿ ಅವರನ್ನೊಳಗೊಂಡ ತಂಡವನ್ನು ರಚಿಸಿದ್ದು, ಸೂಕ್ತ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

# ಕೇಂದ್ರ ಕಾರಾಗೃಹದಲ್ಲಿ ಅಧ್ಯಯನ ಕೇಂದ್ರ ಉದ್ಘಾಟನೆ




**ಉದಯರಶ್ಮಿ ನ್ಯೂಸ್**

ವಿಜಯಪುರ: ಕರ್ನಾಟಕ ರಾಜ್ಯೋತ್ಸವ ದಿನದಂದು ನಗರದ ಕೇಂದ್ರ ಕಾರಾಗೃಹದಲ್ಲಿ ಮೈಸೂರು ಗಂಗೋತ್ರಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಬಂಧಿಗಳಿಗೆ ಉನ್ನತ ಶಿಕ್ಷಣ ಮತ್ತು ಕೌಶಲ್ಯಾಧಾರಿತ ವೃತ್ತಿಪರ ಕೋರ್ಸ್ಗಳ ಅಧ್ಯಯನ ಕೇಂದ್ರಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಕೇಂದ್ರದ ಉದ್ಘಾಟನೆ ನೆರವೇರಿಸಿ ಮಾತನಾಡಿ, ಕಾರಾಗೃಹದ ಬಂಧಿಗಳು ಬಿಡುಗಡೆಯ ನಂತರದ ಭವಿಷ್ಯದ ಬದುಕನ್ನು ರೂಪಿಸಿಕೊಳ್ಳಲು ಉನ್ನತ ಶಿಕ್ಷಣ ಕೇಂದ್ರಗಳು ಅತೀ ಅಗತ್ಯವಾಗಿವೆ. ಬಂದಿಗಳ ಭವಿಷ್ಯದ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ಹಮ್ಮಿಕೊಳ್ಳಲು ಜಿಲ್ಲಾಡಳಿತದಿಂದ ಸಹಕಾರ ನೀಡಲಾಗುವುದು ಎಂದು ತಿಳಿಸಿದ ಅವರು, ಕನ್ನಡ ಭಾಷೆ, ನೆಲ, ಜಲದ ಕುರಿತಾದ ಗ್ರಂಥ-ಗಳನ್ನು ಕಾರಾಗೃಹದ ಗ್ರಂಥಾಲಯಕ್ಕೆ ಒದಗಿಸುವುದಾಗಿ ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಅವರು ಮಾತನಾಡಿ, ಕಾರಾಗೃಹದ ಕೈದಿಗಳಿಗೆ ಇದೊಂದು ಸದಾವಕಾಶ ದೊರೆತಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾರಾಗೃಹದ ಅಧೀಕ್ಷಕ ಡಾ॥ ಐ.ಜೆ.ಮ್ಯಾಗೇರಿ ಅವರು ಮಾತನಾಡಿ, ಹೆತ್ತತಾಯಿ ಹೊತ್ತ ನಾಡು ಸ್ವರ್ಗ ಸಮಾನ. ಒಳ್ಳೆಯ ಮನುಷ್ಯರಾಗಿ ಬದುಕುವ ಅವಕಾಶ ಪಡೆಯಿರಿ.ಶ್ರೇಷ್ಠನಾಗಲು ಸಾಕಷ್ಟು ಸಮಯ ಮತ್ತು ಸಹನೆ ಬೇಕು ಕನಿಷ್ಠನಾಗಲು ಸ್ವಲ್ಪ ಸಮಯ ಸಾಕು ಸಕಲ ಮೂಲ ಸೌರ್ಯಗಳನ್ನು ನೀಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದು, ಇದರ ಸದುಪಯೋಗವಾಗಲಿ ಎಂದು ಹೇಳಿದರು.

ಕಾರಾಗೃಹದ ಸಹಾಯಕ ಆಡಳಿತಾಧಿಕಾರಿ ರವಿ ಲಮಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕ ಅರುಣ.ಕೆ.ಎಸ್. ಕಾರಾಗೃಹದ ಮುಖ್ಯ ವೈದ್ಯಾಧಿಕಾರಿ ಡಾ॥ ಅನಿಲ ಕೊರಬು ಸೇರಿದಂತೆ ಕಾರಾಗೃಹದ ಅಧಿಕಾರಿ-ಸಿಬ್ಬಂದಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಶಕೀನಾಬೇಗಂ ನದಾಫ್ ನಿರೂಪಿಸಿ ವಂದಿಸಿದರು ಹಾಗೂ ಸಂತೋಷ ಸಂತಾಗೋಳ ಸ್ವಾಗತಿಸಿದರು.

# ಸ್ಥಬ್ಧಚಿತ್ರದಲ್ಲಿ ಇಂಗ್ಲೀಷ್: ಕನ್ನಡ ಹೋರಾಟಗಾರರ ಆಕ್ರೋಶ

**ಉದಯರಶ್ಮಿ ನ್ಯೂಸ್**




ಮುದ್ದೇಬಿಹಾಳ: ಇಲ್ಲಿನ ತಾಲೂಕಾಡಳಿತದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಸರಿಯಾಗಿ ಕಾರ್ಯನಿರ್ವಹಿಸದೇ ಇಂಗ್ಲೀಷ್ ನಾಮಫಲಕಗಳನ್ನು ಹೊಂದಿದ ಶಾಲೆಗಳ ಸ್ಥಬ್ಧ ಚಿತ್ರವನ್ನು ಊರೆಲ್ಲ ಮೆರವಣಿಗೆ ಮಾಡಿ, ಕನ್ನಡ ಪರ ಸಂಘಟನೆಗಳಿಗೆ ಮತ್ತು ಕನ್ನಡಾಭಿಮಾನಿಗಳ ಮನಸ್ಸಿಗೆ ನೋವು ತಂದಿದ್ದು ಜಿಲ್ಲಾಧಿಕಾ-ರಿಗಳು ಈ ಕೂಡಲೇ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಕನ್ನಡಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದರು.

ಜಯ ಕರ್ನಾಟಕ ಸಂಘಟನೆಯ ತಾಲೂಕು ಮುಖಂಡ ಹುಸೇನ ಮುಲ್ಲಾ, ಕರ್ನಾಟಕ ರಕ್ಷಣಾ ವೇದಿಕೆ ಯುವಸೇನೆಯ ಜಿಲ್ಲಾ ಅಧ್ಯಕ್ಷ ಮಂಜುನಾಥ ಕೊಪ್ಪ ಸೇರಿದಂತೆ ಮತ್ತೀತರರು ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಕನ್ನಡ ಬಳಸಿ ಕನ್ನಡ ಉಳಿಸಿ ಎಂದು ಅಧಿಕಾರಿಗಳು ಭಾಷಣ ಮಾಡುತ್ತಾರೆ. ಆದರೆ ಸ್ಥಬ್ಧ ಚಿತ್ರಗಳ ಸಂಪೂರ್ಣ ಜವಾಬ್ದಾರಿ ಹೊತ್ತ ಬಿಇಓ ಯು.ಬಿ.ಧ-ರಿಕಾರ ಶಾಲೆಯವರಿಗೆ ಸೂಕ್ತ ಮಾರ್ಗದರ್ಶನ ನೀಡದೇ ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿದ್ದ-ರಿಂದ ಇಂಗ್ಲೀಷ್ ನಾಮಫಲಕಗಳುಳ್ಳ ಶಾಲೆಗಳ ಸ್ಥಬ್ಧ ಚಿತ್ರಗಳನ್ನು ತಾನೇ ಮುಂದೆ ನಿಂತು ಊರೆಲ್ಲ ಮೆರವಣಿಗೆಯ ಮೂಲಕ ಪ್ರದರ್ಶಿಸಿ ರಾಜ್ಯದ ಕನ್ನಡ ಮನಸ್ಸುಗಳಿಗೆ ನೋವುಂಟು ಮಾಡಿದ್ದಾರೆ. ಈ ಬಗ್ಗೆ ಪ್ರಶ್ನಿಸಿದರೆ ಈ ನಾಮಫಲಕವನ್ನು ನಾನು ಗಮನಿಸಿಲ್ಲ ಎಂದು ಬೇಜಬ್ದಾ-ರಿಯುತ ಉತ್ತರ ನೀಡಿದ್ದಾರೆ. ಅಲ್ಲದೇ ಇಂಗ್ಲೀಷ್ ನಾಮಫಲಕಗಳನ್ನು ಗಮನಿಸಿ ನಾವು ಸ್ಥಬ್ಧ ಚಿತ್ರಗಳಿಗೆ ಪ್ರಶಸ್ತಿ ನೀಡುವ ಸಂದರ್ಭ ಆ ಶಾಲೆಗಳಿಗೆ ಪ್ರಶಸ್ತಿ ನೀಡಬಾರದೆಂದು ಮನವಿ ಮಾಡಿಕೊಂಡರೆ ಪ್ರಶಸ್ತಿಗಳನ್ನು ಅವರ ಶಾಲೆಗೇ ಕಳಿಸುವುದಾಗಿ ಘೋಷಿಸುವಂತೆ ಸೂಚಿಸುತ್ತಾರೆ. ಇದೆಲ್ಲವನ್ನು ನೋಡಿದರೆ ಬಿಇಓ ಧ-ರಿಕಾರ ಗೆ ಕನ್ನಡದ ಮೇಲೆ ಎಷ್ಟೊಂದು ಅಭಿಮಾನವಿದೆ ಎಂದು ತಿಳಿಯುತ್ತದೆ. ಕನ್ನಡದ ಬಗ್ಗೆ ಕನ್ನಡಾಭಿಮಾನದ ಬಗ್ಗೆ ವಿಶೇಷ ಕಾಳಜಿ ಇರಬೇಕಾದ ಕ್ಷೇತ್ರ ಶಿಕ್ಷಣಾಧಿಕಾರಿಯ ನಿರ್ಲಕ್ಷತನವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಕೂಡಲೇ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ರಾಜ್ಯದಾದ್ಯಂತ ಕನ್ನಡಪರ ಸಂಘಟನೆಗಳು ಬೀದಿಗಿಳಿದು ಹೋರಾಟ ನಡೆಸುವ ಅನಿವಾರ್ಯತೆ ಎದುರಾಗುತ್ತದೆ ಎಂದರು.



## ಸ್ಥಬ್ಧ ಚಿತ್ರಗಳ ಪ್ರದರ್ಶನ ಕುರಿತು ನಿಯಮ ಏನು ಹೇಳುತ್ತೆ?

ಕನ್ನಡ ರಾಜ್ಯೋತ್ಸವದಂದು ಸ್ಥಬ್ಧ ಚಿತ್ರಗಳ ಪ್ರದರ್ಶನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಯ ಪಾತ್ರ ಬಹಳ ಪ್ರಮುಖವಾಗಿರುತ್ತದೆ. ಯಾವ ಶಾಲೆಗಳು ಯಾರ ಸ್ಥಬ್ಧ ಚಿತ್ರಗಳನ್ನು ತಯಾರಿಸಬೇಕು ಮತ್ತು ಏನೆಲ್ಲ ಒಳಗೊಂಡಿರಬೇಕು ಎಂಬುದನ್ನು ಆಯ್ಕೆಯಾದ ಶಾಲೆಗಳ ಮುಖ್ಯಾಪಾಧ್ಯಾಪಕರನ್ನು ಕರೆದು ಪೂರ್ವಭಾವಿ ಸಭೆ ಕರೆದು ಚರ್ಚಿಸಿ ಎಲ್ಲಿಯೂ ಇಂಗ್ಲೀಷ್ ಬಳಸದೇ, ಯಾವುದೇ ಲೋಪ ದೋಷಗಳು ನಡೆಸದಂತೆ ಸೂಕ್ತ ಮಾರ್ಗದರ್ಶನ ನೀಡಬೇಕು ಎಂಬುದಾಗಿದೆ. ಆದರೆ ಇವರು ಯಾವುದೇ ಪೂರ್ವಭಾವಿ ಸಭೆ ನಡೆಸದೇ ನೇರವಾಗಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಸೂಚಿಸಿದ್ದಾರೆ ಎಂಬ ಮಾತುಗಳು ಕೇಳಿಬಂದವು.

## ಕನ್ನಡ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ ಬಳಕೆ

ನಮ್ಮ ತಾಲೂಕಿನಲ್ಲಿ ಹಲವಾರು ಶಾಲೆಗಳು ಕನ್ನಡ ಮಾಧ್ಯಮದ ಪರವಾನಗೆ ಪಡೆದು ಇಂಗ್ಲೀಷ್ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿವೆ. ಈ ಬಗ್ಗೆ ಹಲವಾರು ಬಾರಿ ತಮ್ಮ ಗಮನಕ್ಕೆ ತಂದರೂ ಯಾವುದೇ ರೀತಿಯಿಂದ ನೀವು ಕ್ರಮ ಕೈಗೊಳ್ಳುತ್ತಿಲ್ಲ. ಬದಲಾಗಿ ಪ್ರೋತ್ಸಾಹಿಸುತ್ತಿದ್ದೀರಿ. ಇದನ್ನ ನಾವು ಗಂಭೀರವಾಗಿ ಖಂಡಿಸುತ್ತೇವೆ. ಈ ಬಗ್ಗೆ ಡಿಡಿಪಿಐ ಗೆ ದೂರುವುದಾಗಿ ಪ್ರಭಾರ ಬಿಇಓ ಧರಿಕಾರ ಗೆ ಮಾಧ್ಯಮದವರ ಎದುರು ಕರ್ನಾಟಕ ರಕ್ಷಣಾ ವೇದಿಕೆ ಯುವಸೇನೆಯ ಜಿಲ್ಲಾ ಅಧ್ಯಕ್ಷ ಮಂಜುನಾಥ ಕೊಪ್ಪ ತರಾಟೆಗೆ ತೆಗೆದುಕೊಂಡರು.

# ನಾಡು-ನುಡಿಗಾಗಿ ಒಗ್ಗಟ್ಟಾಗಿರಬೇಕು :ಡಾ.ಮಾದನಶೆಟ್ಟಿ



**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿರುವುದು ನಮ್ಮ ದೇಶದ ಹೆಮ್ಮೆ. ನಾಡು-ನುಡಿಯ ಏಕತೆಗಾಗಿ ನಾವು ಒಗ್ಗಟ್ಟಾಗಿರಬೇಕೆಂದು ಡಾ.ಯುವರಾಜ ಮಾದನಶೆಟ್ಟಿ ಹೇಳಿದರು.

ಪಟ್ಟಣದ ಬಿಎಲ್ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಕರ್ನಾಟಕ ನಮಗೆ ಎಲ್ಲವನ್ನು ನೀಡಿ ಪೋಷಿಸುತ್ತಿರುವುದರಿಂದ ನಾವು ನಮ್ಮ ನಾಡು-ನುಡಿ, ಗಡಿ,ಜಲ ಸೇರಿದಂತೆ ಅಖಂಡ ಕರ್ನಾಟಕದ ರಕ್ಷಣೆಗೆ ತನು-ಮನ-ಧನದಿಂದ ಸಕ್ರಿಯವಾಗಿ ಪಾಲ್ಗೊಂಡಾಗ ಮಾತ್ರ ನಾವು ಭದ್ರವಾದ ಮತ್ತು ನೆಮ್ಮದಿಯ ಜೀವನವನ್ನು ಸಾಗಿಸಲು ಸಾಧ್ಯ ಎಂದು ಅಭಿಪ್ರಾಯ ಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಎ.ವ್ಹಿ.ಸೂರ್ಯವಂಶಿ ಮಾತನಾಡಿ, ಕನ್ನಡ ನಾಡಿನ ಸೊಬಗನ್ನು ಕುರಿತು ಮಾತನಾಡಿದರು.

ವೇದಿಕೆಯಲ್ಲಿ ಐಕ್ಯೂಎಸಿ ಸಂಂ-ಯೋಜಕ ಪ್ರೊ.ದಿಲೀಪಕುಮಾರ, ಕೆಎನ್-ಎಸ್ಎಸ್, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ವೈ.ಬಿ.ನಾಯಕ, ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಡಿ. ಎಸ್.ಲಗಳಿ, ಪಿಯು ಕಾಲೇಜಿನ ಪ್ರಾಚಾರ್ಯ ಆರ್.ಎ.ಪವಾರ ಇದ್ದರು. ಪ್ರೊ.ಡಿ.ಎಸ್.ಲಗಳಿ ನಿರೂಪಿಸಿದರು. ಪ್ರೊ.ಬಿ.ಆರ್.ಮ್ಯಾಗೇರಿ ವಂದಿಸಿದರು.

ಇದೇ ಸಂದರ್ಭದಲ್ಲಿ ಕನ್ನಡ ನಾಡಿನ ಗತವೈಭವವನ್ನು ಸಾರುವ ಐದು ಗೀತೆಗಳ ಗಾಯನ ಮಾಡಲಾಯಿತು.

# ಜನ ಸಂಪರ್ಕ ಸಭೆ: ಅಂಚೆ ಸೇವೆಗಳ ಬಳಕೆಗೆ ಕರೆ

**ಉದಯರಶ್ಮಿ ನ್ಯೂಸ್**




ಬಸವನಬಾಗೇವಾಡಿ: ಅಂಚೆ ಇಲಾಖೆಯ ಮೂಲಕ ನಾಗರಿಕರು ಕೇಂದ್ರ ಮತ್ತು ರಾಜ್ಯ ಸರ್ಕಾರ ಜಾ-ರಿಗೆ ತಂದಿರುವ ವಿವಿಧ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಬೇಕೆಂದು ವಿಜಯಪುರ ಪೂರ್ವ ವಿಭಾಗದ ಅಂಚೆ ನಿರೀಕ್ಷಕ ಎಸ್.ಸಿ.ವಾಲಿಕಾರ ಹೇಳಿದರು.

ತಾಲೂಕಿನ ಹೂವಿಹಿಪ್ಪರಗಿ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿ ಮಂಗಳವಾರ ಅಂಚೆ ಇಲಾಖೆಯ ಆಶ್ರಯದಲ್ಲಿ ನಡೆದ ಜನಸಂಪರ್ಕ ಅಭಿಯಾನದಲ್ಲಿ ಮಾತನಾಡಿದ ಅವರು, ಬದಲಾಗುತ್ತಿರುವ ಕಾಲಮಾನಕ್ಕೆ ತಕ್ಕಂತೆ ಗ್ರಾಹಕರ ಅಪೇಕ್ಷೆಗನುಗುಣವಾಗಿ ಆಧ-ನಿಕ ತಂತ್ರಜ್ಞಾನವನ್ನು ಭಾರತೀಯ ಅಂಚೆ ಇಲಾಖೆ ಅಳವಡಿಸಿಕೊಂಡಿದೆ. ಉಳಿತಾಯ ಖಾತೆ, ಹೆಣ್ಣು ಮಕ್ಕಳಿಗೆ ಸುಕನ್ಯಾ ಸಮೃದ್ಧಿ ಯೋಜನೆ ಖಾತೆ, ಅಂಚೆ ಜೀವ ವಿಮೆ, ಇಂಡಿಯಾ ಪೋಸ್ಟ್ ಪೇಮೆಂಟ್ ಬ್ಯಾಂಕ್, ಸೇವೆಗಳನ್ನು ಅಂಚೆ ಇಲಾಖೆ ನೀಡುತ್ತಿದೆ. ಎಂದರು.

ಭಾರತದಾದ್ಯಂತ ಪ್ರತಿ ಗ್ರಾಮದಲ್ಲಿ, ಪಟ್ಟಣ ನಗರಗಳಲ್ಲಿ ಅಂಚೆ ಸಿಬ್ಬಂದಿ ಇದ್ದು. ನಿತ್ಯ ಮನೆ ಬಾಗಿಲಿಗೆ ಹೋಗಿ ಅಂಚೆ ಸೇವೆಗಳನ್ನು ತಲುಪಿಸುತ್ತಿದ್ದಾರೆ. ಈಚೆಗೆ ಸರ್ಕಾರ ತಂದಿರುವ ಹತ್ತು ಹಲವು ಯೋಜನೆಗಳ ಹಣವನ್ನು ಫಲಾನುಭವಿಗಳ ಖಾತೆಗಳಿಗೆ ನೇರವಾಗಿ ಮುಟ್ಟಿಸಲಾಗುತ್ತಿದೆ ಎಂದರು.

ಗ್ರಾಮ ಪಂಚಾಯತಿ ಸದಸ್ಯ ಸಿದ್ದು ಹಾದಿಮನಿ ಮಾತನಾಡಿ, ಅಂಚೆ ಇಲಾಖೆಯ ಸೇವೆಗಳನ್ನು ಅದರಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿ ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ. ಸೌಜನ್ಯದ ಸೇವೆಗೆ ಅಂಚೆ ಇಲಾಖೆ ಉಳಿದವರಿಗೆ ಮಾದರಿ ಎಂದರು.

ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಎಸ್.ಎಸ್.ಬಿರಾದಾರ ಮಾತನಾಡಿ, ಇಂದು ಕಷ್ಟಪಟ್ಟು ಉಳಿಸುವ ಹಣ ಭವಿಷ್ಯದಲ್ಲಿ ಆಪತ್ಕಾಲದಲ್ಲಿ ನಮಗೆ ನೆರವಾಗುತ್ತದೆ. ಜನರು ನಿತ್ಯ ಒಂದಿಷ್ಟು ಉಳಿತಾಯ ಮಾಡಿ ಅಂಚೆ ಇಲಾಖೆಯ ಯೋಜನೆಗಳಲ್ಲಿ ಹಣ ತೊಡಗಿಸಬೇಕು ಎಂದರು.

ಹೂವಿನಹಿಪ್ಪರಗಿ ಪೋಸ್ಟ್ ಮಾಸ್ಟರ್ ಮಹಾಬಲೇಶ್ವರ ಗಡೇದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವೇದಿಕೆಯಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಶಿವಬಾಯಿ ಭೀಮಣ್ಣ ಗಿರಿನಿವಾಸ, ಗಣ್ಯರಾದ ಶಿವಣ್ಣ ಲಗಳಿ, ಸುಭಾಸ ಆಯೆಟ್ಟಿ, ಅಬ್ಬಾಸ ಅಲಿ ಚಪ್ಪರಬಂದ, ಶ್ರೀಶೈಲ ಕನಮಡಿ, ಸಂತೋಷ ತೋಟದ ಇದ್ದರು. ಹೀನಾ ತೊದಲಬಾಗಿ ಪ್ರಾರ್ಥಿಸಿದರು. ಅಕ್ಷಯಕುಮಾರ ಬಿರಾದಾರ ಸ್ವಾಗತಿಸಿದರು. ಶ್ರೀನಿವಾಸ ಪಾಟೀಲ ನಿರೂಪಿಸಿದರು. ಅನಿಲ ದೇಸಾಯಿ ವಂದಿಸಿದರು.

## ಬಸವನಬಾಗೇವಾಡಿಯಲ್ಲಿ ಬಿಎಲ್‌ಡಿ ಸೌಹಾರ್ದ ಶಾಖೆ ಉದ್ಘಾಟಿಸಿ ಎಂಎಲ್‌ಸಿ ಸುನೀಲಗೌಡ ಸ್ಪಷ್ಟನೆ

# ಬಿಎಲ್‌ಡಿ ಸೌಹಾರ್ದ ಉತ್ತರ ಕರ್ನಾಟಕದಾದ್ಯಂತ ವಿಸ್ತರಣೆ

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ಕಳೆದ 2022, ಅಕ್ಟೋಬರ್ 7 ರಂದು ಜ್ಞಾನಯೋಗಿ ಸಿದ್ದೇಶ್ವರ ಸ್ವಾಮೀ-ಜಿಯವರಿಂದ ಉದ್ಘಾಟನೆಗೊಂಡ ಬಿಜಾಪುರ ಲಿಂಗಾಯತ ಡೆವಲಪ್‌ಮೆಂಟ್ ಸೌಹಾರ್ದ ಸಹಕಾರಿ ಸಂಘವು ಆರು ತಿಂಗಳಲ್ಲಿಯೇ ಜನರ ವಿಶ್ವಾಸ, ಸಹಕಾರದಿಂದಾಗಿ ರೂ. 100 ಕೋಟಿ ವ್ಯವಹಾರ ಮಾಡುವ ಮೂಲಕ ಉತ್ತಮ ಸಾಧನೆ ಮಾಡಿದೆ. ಮುಂಬರುವ ದಿನಗಳಲ್ಲಿ ನಮ್ಮ ಸೌಹಾರ್ದ ಶಾಖೆಯನ್ನು ಇಡೀ ಉತ್ತರ ಕರ್ನಾಟಕ ವ್ಯಾಪ್ತಿಗೆ ವಿಸ್ತ-ರಿಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ, ಬಿಎಲ್‌ಡಿ ಸೌಹಾರ್ದ ಅಧ್ಯಕ್ಷ ಸುನೀಲಗೌಡ ಪಾಟೀಲ ಹೇಳಿದರು.

ಪಟ್ಟಣದ ಬಸವೇಶ್ವರ ದೇವಸ್ಥಾನದ ಸಂಕೀರ್ಣದ ಎಸ್‌ಬಿಐ ಬ್ಯಾಂಕ್ ಮೇಲ್ಮಹಡಿ ಕಟ್ಟಡದಲ್ಲಿ ಬುಧವಾರ ಬಿಎಲ್‌ಡಿ ಸೌಹಾರ್ದದ ಶಾಖೆಯನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸೌಹಾರ್ದ ಮೇಲೆ ಜನರು ವಿಶ್ವಾಸವಿಟ್ಟು ಪಿಗ್ಮಿ, ಠೇವಣಿ ಇಡುತ್ತಿದ್ದಾರೆ. ನಾವು ಜನರ ವಿಶ್ವಾಸ ಕಳೆದುಕೊಳ್ಳದೇ ಉತ್ತಮವಾಗಿ ಸೌಹಾರ್ದವನ್ನು ನಡೆಸಿಕೊಂಡು ಹೋಗುತ್ತೇವೆ. ಸೌಹಾರ್ದಗಳು ಉತ್ತಮವಾಗಿ ನಡೆಯಲು ಆಯಾ ಆಡಳಿತ ಮಂಡಳಿಯಿಂದ ಮಾತ್ರ ಸಾಧ್ಯ ಎಂಬುವದನ್ನು ಗ್ರಾಹಕರು ತಿಳಿದುಕೊಳ್ಳಬೇಕು. ನಾವು ನಮ್ಮ ಸೌಹಾರ್ದದ ಐದನೇ ಶಾಖೆಯನ್ನು ಬಸವೇಶ್ವರ ಜನ್ಮಸ್ಥಳ ಬಸವನಬಾಗೇವಾಡಿಯಲ್ಲಿ ಇಂದು ಆರಂಭಿಸಲಾಗಿದೆ. ಈ ಭಾಗದ ಜನರು ನಮ್ಮ ಸೌಹಾರ್ದದ ಸದುಪಯೋಗ ಪಡೆದುಕೊಳ್ಳಬೇಕು. ಆರನೇ ಶಾಖೆಯನ್ನು ಸಾವಳಗಿಯಲ್ಲಿ ಆರಂಭಿಸಲಾಗುವುದು. ಮುಂಬರುವ ದಿನಗಳಲ್ಲಿ ತಾಳಿಕೋಟಿ, ಇಂಡಿ ಸೇ-ರಿದಂತೆ ವಿವಿಧೆಡೆ ನಮ್ಮ ಶಾಖೆಗಳನ್ನು ಆರಂಭಿಸಲಾಗುವುದು ಎಂದರು.

ಸಾನಿಧ್ಯ ವಹಿಸಿದ್ದ ಸಿದ್ದಲಿಂಗ ಸ್ವಾಮೀಜಿ, ಸೌಹಾರ್ದದ ಸ್ಥಳೀಯ ಸಮಿತಿ ಅಧ್ಯಕ್ಷ ಬಿ.ಆರ್.ಅಡ್ಡೋಡಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸೌಹಾರ್ದದ ಉಪಾಧ್ಯಕ್ಷ ಶರಣಬಸಪ್ಪ ಗುಡ್ಡೋಡಗಿ, ಸ್ಥಳೀಯ ಸಮಿತಿಯ ಸದಸ್ಯರಾದ ಡಾ.ಮಹಾಂತೇಶ ಜಾಲಗೇರಿ, ಡಾ.ಬಸವರಾಜ ಗುಬ್ಬ, ಸುನೀಲ ದುಂಬಾಳೆ, ಸಂತೋಷ ಲಮಾಣಿ, ಸಿದ್ದು ಸಾಸನೂರ, ಸಿ.ಪಿ.ಪಾಟೀಲ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಸೌಹಾರ್ದದ ಮಾರ್ಗದರ್ಶಕರಾದ ವಿಜಯಕುಮಾರ ಕನಮಡಿ, ಶಂಕರಗೌಡ ಪಾಟೀಲ, ಅಶೋಕ ಖಾಡಗಿ, ಎಸ್.ಕೆ.ಗೊಂಗಡಿ, ಸೌಹಾರ್ದದ ಸಿಇಓ ವಿಜಯ ಜತ್ತಿ, ಮುಖ್ಯ ವ್ಯವಸ್ಥಾಪಕ ಪ್ರತಾಪ, ಮುಖಂಡರಾದ ಡಾ.ಮಹಾಂತೇಶ ಬಿರಾದಾರ, ಜಗದೀಶ ಕೊಟ್ರಶೆಟ್ಟಿ, ಶೇಖರ ಗೊಳಸಂಗಿ, ಬಸವರಾಜ ಹಾರಿವಾಳ, ಲ.ರು.ಗೊಳಸಂಗಿ, ಎಂ.ಜಿ.ಆದಿಗೊಂಡ, ಸುರೇಶ ಪಾಟೀಲ, ಸುರೇಶ ಹಾರಿವಾಳ, ರಮೇಶ ಯಳಮೇಲಿ, ಎಸ್. ಎಸ್.ಹಿರೇಮಠ, ರಾಜು ಪಾಟೀಲ, ರಮಜಾನ ಮುಜಾವರ, ಪ್ರವೀಣ ಪಾಟೀಲ, ಚೇತನ ಮಠಪತಿ, ಚನ್ನಬಸು ಮುರಾಳ ಇತರರು ಇದ್ದರು.

# ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ :ಬಸವರೆಡ್ಡಿ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ಕರ್ನಾಟಕ ರಕ್ಷಣಾ ವೇದಿಕೆ ವೃತ್ತ, ನಿವೃತ್ತ ನೌಕರರ ಸಂಘ ಸೇರಿದಂತೆ ವಿವಿಧೆಡೆಯಲ್ಲಿ ನಾಡದೇವಿಗೆ ಪೂಜೆ ಸಲ್ಲಿಸಿ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಪಟ್ಟಣದಲ್ಲಿ ಬುಧವಾರ ರಾಜ್ಯೋತ್ಸವ ಅಂಗವಾಗಿ ನಾಡದೇವಿಯ ಭಾವಚಿತ್ರಕ್ಕೆ ಸೋಮಶೇಖರ ಹಿರೇಮಠ ಪೂಜೆ ಸಲ್ಲಿಸಿದರು.

ನಂತರ ಪ್ರೌಢಶಾಲೆಯ ನಿವೃತ್ತ ಮುಖ್ಯಗುರು ಎಸ್. ಎನ್. ಬಸವರೆಡ್ಡಿ ಮಾತನಾಡಿ, ಕನ್ನಡ ನಾಡು ನುಡಿಗಾಗಿ ನಾವೆಲ್ಲ ಶ್ರಮಿಸಬೇಕು. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮವಾಗಿದ್ದು, ನಾವೆಲ್ಲ ಕನ್ನಡತನ ಉಳಿಸಿ, ಬೆಳೆಸುವಲ್ಲಿ ಮುಂದಿರಬೇಕು ಎಂದರು.

ತಹಶೀಲ್ದಾರ ಪ್ರಕಾಶ ಸಿಂದಗಿ, ಶಿರಸ್ತೇದಾರ ಸುರೇಶ ಮ್ಯಾಗೇರಿ, ಕರವೇ ತಾಲ್ಲೂಕು ಅಧ್ಯಕ್ಷ ಮಡುಗೌಡ ಬಿರಾದಾರ, ನಗರ ಅಧ್ಯಕ್ಷ ಮುನ್ನಾ ಮಳಖೇಡ, ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಶಿವರಾಜ್ ತಳವಾರ, ಯುವಘಟಕದ ಅಧ್ಯಕ್ಷ ಚಂದ್ರಶೇಖರ ದಾನಗೊಂಡ, ಆಕಾಶ ಕೊಕಟನೂರ, ಪ್ರಕಾಶ ಡೋಣೂರಮಠ, ಮಂಜುನಾಥ ಇಂಡಿ, ಚೇತನ ಪಾಟೀಲ, ಸುನೀಲ ಮಣೂರ, ರಿಷಿಕೇಶ ತಳವಾರ, ಆಕಾಶ ತಾಂಬೆ, ಗುರುರಾಜ್ ಬಿರಾದಾರ, ರಾಕೇಶ ದಾನಗೊಂಡ, ಸಚೀನ ಮಾಲಗಾರ, ಸಂತೋಷ ಪಾಟೀಲ ಇದ್ದರು.

ಸಿದ್ಧೇಶ್ವರ ಸ್ವಾಮೀಜಿ ಪ್ರೌಢಶಾಲೆ: ಶಾಲಾ ಆವರಣದಲ್ಲಿ ನಾಡದೇವಿಗೆ ಪೂಜೆ ಸಲ್ಲಿಸಲಾಯಿತು. ನಂತರ ಕನ್ನಡದ ಹೋರಾಟಗಾರರು ಹಾಗೂ ಕನ್ನಡಕ್ಕಾಗಿ ಸೇವೆ ಸಲ್ಲಿಸಿದ ಮಹನೀಯರ,ಕವಿಗಳ ವೇಷಭೂಷಣ ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡರು.

ಸಂಸ್ಥೆಯ ಅಧ್ಯಕ್ಷ ವ್ಹಿ.ಕೆ. ಪಾಟೀಲ, ಮಹಾಂತೇಶ ಬೀಳಗಿ, ಎ.ಕೆ.ಆನಂದ, ಶ್ರೀಕಾಂತ ತೋಳನೂರ, ಎಮ್.ಎಸ್.ಪಾಟೀಲ, ಕಾಶೀನಾಥ ಯಂಭತ್ನಾಳ ಸೇರಿದಂತೆ ಸಿಬ್ಬಂದಿ ಇದ್ದರು.

ನಿವೃತ್ತ ನೌಕರರ ಸಂಘ: ಸದಯ್ಯನಮಠದಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ನಾಡದೇವಿ ಭುವನೇಶ್ವ-ರಿಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ನಂತರ ನಿವೃತ್ತ ಉಪನ್ಯಾಸಕ ಎಂ.ಆರ್.ಶಿರಸಂಗಿಮಠ, ಸಂಘದ ಅಧ್ಯಕ್ಷ ಚನ್ನವೀರ ಕುದರಿ ಮಾತನಾಡಿದರು.

ಎಸ್.ವ್ಹಿ.ಆಲಾಳಮಠ, ಕೆ.ಸಿ.ಮಠ, ಎಸ್. ಎಂ.ಯರನಾಳ, ಪಿ.ಜಿ.ಹಿರೇಮಠ, ಜಿ.ಆಯ್. ಒಂಟೆತ್ತೀನ, ಬಿ.ಎಂ.ಕಠಾರಿ, ಪಿ.ಎಸ್.ಮಿಂಚನಾಳ, ಬಿ.ಆರ್.ನಾಗೂರ, ಕೆ.ಕೆ.ಭಾವಿಮನಿ, ಎಸ್.ಎಂ.ಇಂಡಿ, ಜಿ.ಎ.ಪಾಟೀಲ, ಲೋಗಾವಿ, ಎಸ್.ಎನ್.ಸಾಕಳೆ, ಬಾಬುಗೌಡ ಪಾಟೀಲ ಸೇರಿದಂತೆ ಇತರರು ಇದ್ದರು.

# ಬಸವನಬಾಗೇವಾಡಿಯಲ್ಲಿ ಕಾಟಾಚಾರದ ರಾಜ್ಯೋತ್ಸವ

ಉದಯರಶ್ಮಿ ನ್ಯೂಸ್



ಬಸವನಬಾಗೇವಾಡಿ: ಪಟ್ಟಣದಲ್ಲಿ ತಾಲೂಕಾಡಳಿತ, ತಾಲೂಕು ಪಂಚಾಯತ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಂಗವಾಗಿ ನಡೆದ ಸ್ತಬ್ಧ ಚಿತ್ರಗಳ ಮೆರವಣಿಗೆಯಲ್ಲಿ ಯಾವುದೇ ವಾದ್ಯಮೇಳವಿಲ್ಲದೇ ಕೇವಲ ಟ್ರ್ಯಾಕ್ಟರ್ಗಳಲ್ಲಿ ವಿವಿಧ ಶಾಲಾ ಮಕ್ಕಳು ವಿವಿಧ ಮಹನೀಯರ ವೇಷಭೂಷಣ ಧರಿಸಿದ ಮೆರವಣಿಗೆ ಹೊರತು ಪಡಿಸಿ ಯಾವುದೇ ಇಲಾಖೆಯ ಸ್ತಬ್ಧ ಚಿತ್ರಗಳು ಕಂಡುಬರದೇ ಕಾಟಾಚಾರಕ್ಕೆ ಎಂಬಂತೆ ತಾಲೂಕಾಡಳಿತದಿಂದ ರಾಜ್ಯೋತ್ಸವ ಜರುಗಿತು.

ತಹಸೀಲ್ದಾರ ಕಚೇರಿಯಲ್ಲಿ ಜರುಗಿದ ಧ್ವಜಾರೋಹಣ ನೆರವೇರಿದ ನಂತರ ಮೆರವಣಿಗೆಯು ಸಪ್ಪಾಗಿ ಸಾಗಿತು. ಮೆರವಣಿಗೆಯು ಬೆಳಗ್ಗೆ 9.30 ಗಂಟೆಗೆ ತಡವಾಗಿ ಸಾಗಿದ ನಂತರ ಡೊಳ್ಳು ಮೇಳ, ಯಾವುದೇ ವಾದ್ಯ ಮೇಳ ಇಲ್ಲ ಎಂದು ಕರವೇ ಯುವ ಘಟಕದ ಅಧ್ಯಕ್ಷ ಅಶೋಕ ಹಾ–ರಿವಾಳ ತಹಸೀಲ್ದಾರ ಜಿ.ಎಸ್.ನಾಯಕ ಅವರ ಗಮನಕ್ಕೆ ತಂದಾಗ ಅವರು ಬಿಇಓ ಅವರಿಗೆ ಹೇಳಿದ್ದೆ. ಅವರು ವ್ಯವಸ್ಥೆ ಮಾಡಿಲ್ಲ ಎಂದಾಗ ಅವರು ಆಕ್ರೋಶಗೊಂಡಾಗ ಬಿಇಓ ವಸಂತ ರಾಠೋಡ ಅವರು ಸ್ಥಳೀಯ ಹೆಣ್ಣುಮಕ್ಕಳ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರಿಂದ ಬ್ಯಾಂಡ್ ಸೆಟ್ ತರಿಸಿ ಅವರಿಂದ ಮೆರವಣಿಗೆ ಕೊಂಚ ಮೆರಗು ಬಂತು. ಮೆರವಣಿಗೆ ಸಾಗುವ ವೇಳೆಯಲ್ಲಿ ಮಾರುಕಟ್ಟೆ ಪ್ರದೇಶದಲ್ಲಿ ಎರಡು ಟ್ರ್ಯಾಕ್ಟರ್ ಚಾಲಕರು ನಾ ಮುಂದು, ತಾ ಮುಂದು ಎಂಬ ಭರಾಟೆಯಲ್ಲಿ ಸಾಗುವಾಗ ಪರಸ್ಪರ ಟ್ರ್ಯಾಕ್ಟರ್ಗಳು ತಾಗಿ ಅಪಘಾತವಾಗುವುದು ಕೂದಲೆಳೆ ಅಂತರದಲ್ಲಿ ತಪ್ಪಿದ ಘಟನೆ ಜರುಗಿತು.

ಮೆರವಣಿಗೆಯು ಒಂದು ಗಂಟೆಯಲ್ಲಿ ಸಾಗಿದ ನಂತರ ಸಮಾರಂಭ ಹಮ್ಮಿಕೊಂಡಿರುವ ಬಸವ ಭವನ ತಲುಪಿದ ನಂತರ ಸುಮಾರು ಅರ್ಧ ಗಂಟೆಯ ವಿಳಂಬವಾಗಿ ಸಮಾರಂಭ ಆರಂಭಗೊಂಡಿತ್ತು. ಸಮಾರಂಭ ಆರಂಭಗೊಂಡರೂ ಬೃಹತ್ ಬಸವ ಭವನದಲ್ಲಿ ಬೆರಳಣಿಗೆಯಷ್ಟು ಸಭಿಕರು ಭಾಗವಹಿಸಿದ್ದು ತಾಲೂಕಾಡಳಿತ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿಯಾಗಿ ಕಂಡುಬಂದಿತ್ತು.

ಸಮಾರಂಭದಲ್ಲಿ ಮಾತನಾಡಿದ ಕರವೇ ಯುವ ಘಟಕದ ಜಿಲ್ಲಾ ಅಧ್ಯಕ್ಷ ಅಶೋಕ ಹಾರಿವಾಳ ಅವರು ಕರ್ನಾಟಕ ರಾಜ್ಯೋತ್ಸವ ಅಚ್ಚುಕಟ್ಟಾಗಿ ತಾಲೂಕಾಡಳಿತ ಮಾಡಿಲ್ಲ. ಪ್ರತಿಯೊಬ್ಬ ಕನ್ನಡಿಗರ ಹಬ್ಬವಾದ ರಾಜ್ಯೋತ್ಸವದಲ್ಲಿ ಎಲ್ಲ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸುವಂತಾದರೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತದೆ. ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಉತ್ಸಾಹದಿಂದ ಭಾಗವಹಿಸುವಂತಾಗಬೇಕೆಂದರು.

ಸಮಾರಂಭದಲ್ಲಿ ವ್ಹಿಡಿಸಿಸಿ ಬ್ಯಾಂಕಿನ ನಿರ್ದೇಶಕಿ ಸಂಯುಕ್ತಾ ಪಾಟೀಲ ಮಾತನಾಡಿ, ಕರ್ನಾಟಕ ಏಕೀಕರಣ–ಕ್ಕಾಗಿ ಸಾಕಷ್ಟು ಮಹನೀಯರು ಶ್ರಮಿಸಿದ್ದಾರೆ. ನಾವೆಲ್ಲರೂ ಕನ್ನಡವನ್ನು ಪ್ರೀತಿಸಿ,ಗೌರವಿಸಬೇಕು. ಮಕ್ಕಳಿಗೆ ಕನ್ನಡದಲ್ಲಿ ಆಸಕ್ತಿ ಬೆಳೆಸುವ ಕಾರ್ಯ ಮಾಡಬೇಕೆಂದರು.

ಉಪನ್ಯಾಸ ನೀಡಿದ ತಳೇವಾಡ ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಯ ಸಂಗಮೇಶ ಪೂಜಾರಿ ಮಾತನಾಡಿ, ಕನ್ನಡ ಭಾಷೆ ಶ್ರೀಮಂತವಾಗಿದೆ. ಇಂತಹ ಶ್ರೀಮಂತ ಭಾಷೆಯನ್ನು ರಾಜಧಾನಿಯಲ್ಲಿ ಹುಡಕಬೇಕಾದ ಪರಿಸ್ಥಿತಿ ಬಂದಿರುವದು ವಿಷಾದನೀಯ. ಕನ್ನಡ ಉಳಿಯಬೇಕಾದರೆ ಪ್ರತಿಯೊಬ್ಬರೂ ಕನ್ನಡವನ್ನು ಬಳಸುವಂತಾಗಬೇಕೆಂದರು.

ಸಾನಿಧ್ಯ ವಹಿಸಿದ್ದ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕನ್ನಡ ಭಾಷಾ ಬೆಳವಣಿಗೆಗೆ ನಾವೆಲ್ಲರೂ ಶ್ರಮಿಸಿದಾಗ ಮಾತ್ರ ನಾವು ಕನ್ನಡ ನಾಡಿನಲ್ಲಿ ಜನಿಸಿದ್ದು ಸಾರ್ಥಕವಾಗುತ್ತದೆ. ಕನ್ನಡ ರಾಜ್ಯೋತ್ಸವವನ್ನು ಡಾಂಭಿಕವಾಗಿ ಆಚರಣೆ ಮಾಡದೇ ಉತ್ಸಾಹದಿಂದ ಆಚರಿಸುವಂತಾದರೆ ಕಾರ್ಯಕ್ರಮ ತುಂಬಾ ಯಶಸ್ವಿಯಾಗುತ್ತದೆ. ಈ ಕಾರ್ಯಕ್ರಮದಲ್ಲಿ ಹೆಚ್ಚು ಖಾಲಿ ಕುರ್ಚಿಗಳಿರುವದು ಕಂಡುಬರುತ್ತಿರುವುದು ವಿಷಾದಕರ ಸಂಗತಿ. ಈ ರೀತಿಯಾಗದಂತೆ ಕಾರ್ಯಕ್ರಮ ಆಯೋಜನೆ ಮಾಡಬೇಕಾದ ಅಗತ್ಯವಿದೆ ಎಂದರು.


ಕಾರ್ಯಕ್ರಮದಲ್ಲಿ ಸಿದ್ದಲಿಂಗ ಸ್ವಾಮೀಜಿ, ತಹಸೀಲ್ದಾರ ಜಿ. ಎಸ್.ನಾಯಕ, ತಾಪಂ ಇಓ ಡಾ.ಯುವರಾಜ ಹನಗಂಡಿ, ಬಿಇಓ ವಸಂತ ರಾಠೋಡ, ಪಿಐ ಶರಣಗೌಡ ನ್ಯಾಮಣ್ಣನವರ, ಮುಖ್ಯಾಧಿಕಾರಿ ಎಚ್.ಎಸ್.ಚಿತ್ತರಗಿ, ಕಸಾಪ ತಾಲೂಕಾಧ್ಯಕ್ಷ ಶಿವರುದ್ರಯ್ಯ ಹಿರೇಮಠ, ಮುಖಂಡರಾದ ಶಂಕರಗೌಡ ಬಿರಾದಾರ, ದೇವೇಂದ್ರ ಗೋನಾಳ, ಶಿವಾನಂದ ಮಂಗಾನವರ, ಸಂಗನಗೌಡ ಚಿಕ್ಕೊಂಡ, ಬಸಣ್ಣ ದೇಸಾಯಿ, ಮಹಾಂತೇಶ ಚಕ್ರವರ್ತಿ, ಮಹಾಂತೇಶ ಸಾಸಾಬಾಳ ಇತರರು ಇದ್ದರು.

ಪಿ.ಯು.ರಾಠೋಡ ಸ್ವಾಗತಿಸಿದರು. ಉಷಾಕಿರಣ ಮನೋಹರ ನಿರೂಪಿಸಿದರು. ಶಿವಾನಂದ ಮಂಗಾನವರ ವಂದಿಸಿದರು.

ಕೊನೆಯಲ್ಲಿ ಸ್ತಬ್ಧ ಚಿತ್ರಗಳ ಮೆರವಣಿಗೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತ–ರಿಸಲಾಯಿತು.

# ನಂ.5 ರಂದು ಶಾಂತಿ ನಾಯಕಗೆ ದೇಸಿ ಸನ್ಮಾನ ಪ್ರಶಸ್ತಿ

ಉದಯರಶ್ಮಿ ನ್ಯೂಸ್



ಸಿಂದಗಿ: ನೆಲೆ ಪ್ರಕಾಶನ ಸಂಸ್ಥೆಯ ಅಡಿಯಲ್ಲಿ ಸ್ಥಾಪಿತವಾಗಿರುವ ಎಂ. ಎಂ. ಪಡಶೆಟ್ಟಿ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ಜಾನಪದ ವಿದ್ವಾಂಸರಾದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶಾಂತಿ ನಾಯಕ ಅವರಿಗೆ 2023ನೆಯ ಸಾಲಿನ ದೇಸಿ ಸನ್ಮಾನ ಪ್ರಶಸ್ತಿ ಜೊತೆಗೆ ನಗದು ಬಹುಮಾನ ನೀಡಿ ಗೌರವಿಸಲಾಗುವುದು ಎಂದು ಪ್ರತಿಷ್ಠಾನದ ಸಂಚಾಲಕ ಡಾ.ಚನ್ನಪ್ಪ ಕಟ್ಟಿ ತಿಳಿಸಿದ್ದಾರೆ.

ಶಾಂತಿ ನಾಯಕ ಅವ–ರಿಗೆ 2023ನೆಯ ಸಾಲಿನ ದೇಸಿ ಸನ್ಮಾನ ಪ್ರಶಸ್ತಿ ಪ್ರದಾನ ಸಮಾರಂಭ ನ. 5ರಂದು ಭಾನುವಾರ ಬೆಳಿಗ್ಗೆ 10:30ಗಂಟೆಗೆ ನಗರದ ಹೊರವಲಯದ ವಿದ್ಯಾಗಿರಿಯ ಜೇವರಗಿ ರಸ್ತೆಯಲ್ಲಿರುವ ಭೀಮಾ ಯುನಿವರ್ಸಲ್ ಸೆಂಟ್ರಲ್ ಸ್ಕೂಲ್‌ನ ಆವರಣದಲ್ಲಿ ಜರುಗಲಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಸಾರಂಗಮಠದ ಡಾ. ಪ್ರಭುಸಾರಂಗದೇವ ಶಿವಾಚಾರ್ಯರು ವಹಿಸಿಕೊಳ್ಳಲಿದ್ದಾರೆ. ಭೀಮಾ ಯುನಿವರ್ಸಲ್ ಸೆಂಟ್ರಲ್ ಸ್ಕೂಲ್‌ನ ಅಧ್ಯಕ್ಷ ವಿಠ್ಠಲ ಕೋಳ್ಳೂರ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಂತಿ ನಾಯಕ ಬದುಕು–ಬರಹ ಕೃತಿ ಬಿಡುಗಡೆಯನ್ನು ಶಾಸಕ ಅಶೋಕ ಮನಗೂಳಿ ನೆರವೇರಿಸಲಿದ್ದಾರೆ. ವಿಶ್ರಾಂತ ಪ್ರಾಧ್ಯಾಪಕ ಡಾ.ಜೆ.ಜಿ.ಜೋಶಿ ಕೃತಿ ಪರಿಚಯ ಮಾಡಲಿದ್ದಾರೆ. ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಕೆ. ತುಳಸಿಮಾಲಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಹಿರಿಯ ವಿದ್ವಾಂಸರಾದ ಶಾಂತಿ ನಾಯಕರಿಗೆ 2023ನೆಯ ಸಾಲಿನ ದೇಸಿ ಸನ್ಮಾನ ಪ್ರಶಸ್ತಿಯನ್ನು ಹಿರಿಯ ವಿಮರ್ಶಕರಾದ ಡಾ.ರಾಮಕೃಷ್ಣ ಮರಾಠೆ, ಡಾ.ವಿಜಯಕುಮಾರ ಕಟಗಿಹಳ್ಳಿಮಠ ಹಾಗೂ ಡಾ. ಎಫ್.ಟಿ ಹಳ್ಳಿಕೇರಿ ಕೂಡಿಗೊಂಡು ಜಾನಪದ ಸಾಹಿತ್ಯದಲ್ಲಿ ಅವರ ಅಪಾರ ಸೇವೆಯನ್ನು ಮಾಡಿದ ಹೊನ್ನಾವರದ ಶಾಂತಿ ನಾಯಕ ಅವರನ್ನು 2023ನೆಯ ಸಾಲಿನ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ ಎಂದು ಪ್ರತಿಷ್ಠಾನದ ಸಂಚಾಲಕ ಡಾ.ಚನ್ನಪ್ಪ ಕಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಂತಿ ನಾಯಕ ಅವರ ಹಿನ್ನಲೆ



ಶಾಂತಿ ನಾಯಕ ಅವರು ಪ್ರೌಢಶಾಲಾ ಶಿಕ್ಕರಾಗಿ ಸೇವೆ ಸಲ್ಲಿಸುತ್ತ ಜಾನಪದಕ್ಕೆ ಸಂಬಂಧಿಸಿದ 48 ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಅರ್ಧ ದಶಕಕ್ಕೂ ಮಿಕ್ಕಿ ಅವರು ನಡೆಸಿದ ಕ್ಷೇತ್ರಕಾರ್ಯ ಆಧಾರಿತ ಕೃತಿಗಳಿವೆ. ಶಾಂತಿ ನಾಯಕ ಅವರಿಗೆ ಇದೀಗ 80ವರ್ಷ.

ಪ್ರಮುಖ ಗ್ರಂಥಗಳು: ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು, ಹವ್ಯಕರ ಕಥೆಗಳು, ಜಾಣೆ ಕನ್ನಡವ ತಿಳಿದ್ಧೇಳೆ, ಜನಪದ ವೈದ್ಯಕೀಯ ಅಡುಗೆಗಳು, ಕಾಡಿನ ಆಹಾರ ಬೆಳೆ, ಸ್ತ್ರೀ ಸಂವೇದನೆ–ವಿಮರ್ಶೆ, ಜೀವ ಉಳಿಸುವ ಕಳೆಗಳು ಇವರ ಪ್ರಮುಖ ಗ್ರಂಥಗಳಾಗಿವೆ.

ಸಣ್ಣ ಸಾಲ ಯೋಜನೆ: ಇವರು ಸಮತಾ ಮಹಿಳಾ ಪತ್ತಿನ ಸಹಕಾರಿ ಸಂಘವನ್ನು ಸ್ಥಾಪಿಸಿ ಆರ್ಥಿಕ ಸಬಲತೆಗೆ ಶ್ರಮಿಸಿದ್ದಾರೆ. ದಂಡದ ಬಡ್ಡಿಗೆ ಅನುವು ಇಲ್ಲದ ಸಣ್ಣ ಸಾಲ ಯೋಜನೆ ಇಲ್ಲಿ ಜನ ಮೆಚ್ಚುಗೆ ಪಡೆದಿದೆ. ಭೂಮಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ಸಂಸ್ಥಾಪಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಮುಸ್ಲಿಂ ಮಹಿಳೆಯರಿಗೆ ತಾಲೂಕಿನಲ್ಲಿ ಯುನಿಟಿ ಮಹಿಳಾ ಸಹಕಾರಿ ಸಂಘ ಪ್ರಥಮ ಸಹಕಾರಿ ಸಂಘವನ್ನು ಸ್ಥಾಪಿಸಲು ಪೂರ್ಣ ನೆರವು ನೀಡಿದ್ದಾರೆ.


ಲಭಿಸಿದ ಪ್ರಶಸ್ತಿಗಳು: ಕನ್ನಡ ಸಾಹಿತ್ಯ ಪರಿಷತ್ತು ಕೊಡಮಾಡುವ ಮಲ್ಲಿಕಾ ಪ್ರಶಸ್ತಿ, ಪದ್ಮಭೂಷಣ ಡಾ.ಬಿ. ಸರೋಜಾದೇವಿ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ಸರಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸರಕಾರದ ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿವೆ.

# ಕರ್ನಾಟಕ ಏಕೀಕರಣಕ್ಕೆ ಪ್ರೇರಕ ಶಕ್ತಿಯಾದ ಮೂಲ ತೈಲವರ್ಣ ಚಿತ್ರವೇ ಕನ್ನಡ ತಾಯಿ ಭುವನೇಶ್ವರಿಯ ಅಧಿಕೃತ ಚಿತ್ರವಾಗಲಿ

ಉದಯರಶ್ಮಿ ದಿನಪತ್ರಿಕೆ

ಅದು 1973ರ ನವಂಬರ್ ಒಂದನೇ ದಿನ.ಕನ್ನಡ ನಾಡನ್ನು ಶತಮಾನಗಳ ಕಾಲ ಆಳಿದ ವಿಜಯನಗರ ಸಾಮ್ರಾಜ್ಯದ ಆರಾಧ್ಯದೈವವಾದ ಹಂಪಿಯ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಸಂಭ್ರಮ, ಸಡಗರ ಮನೆ

ಅಭಿಮತ



–ವೀಣಾ ಎಚ್. ಪಾಟೀಲ್, ಮುಂಡರಗಿ

ಮಾಡಿತ್ತು. ಕನ್ನಡ ನಾಡಿನ ಎಲ್ಲಾ ಹಿರಿಯ ಮುತ್ಸದ್ದಿಗಳು, ಕನ್ನಡ ಪರ ಹೋರಾಟಗಾರರು, ಜನರು ಮುಖ್ಯಮಂತ್ರಿಗಳ ಘೋಷಣೆಗಾಗಿ ಕಾಯುತ್ತಿದ್ದರು. ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿಯಿಂದ ತಂದ ನಾಡ ದೇವಿಯ ಚಿತ್ರಪಟಕ್ಕೆ ಪೂಜಿಸಿದ ಅಂದಿನ ಮುಖ್ಯಮಂತ್ರಿ ಡಿ ದೇವರಾಜ ಅರಸ್ ಅವರು

ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯ ಎಂದು ಪಂಪಾ ವಿರುಪಾಕ್ಷದೇವರ ಸನ್ನಿಧಿಯಲ್ಲಿ ಅಧಿಕೃತವಾಗಿ ಘೋಷಿಸಿದರು.

ಜೊತೆಗೆ ತಾವು ಪೂಜಿಸಿದ ನಾಡದೇವಿಯ ಚಿತ್ರವನ್ನು ಅಧಿಕೃತವಾಗಿ ಕನ್ನಡ ಭುವನೇಶ್ವರಿಯ ಚಿತ್ರವೆಂದು ಅಂಗೀಕರಿಸುವುದಾಗಿ ಹೇಳಿದರು. ಕರ್ನಾಟಕ ರಾಜ್ಯದ ಜನತೆಯ ನೆಚ್ಚಿನ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ್ ಅರಸ್ ಅವರ ಆಶಯದಂತೆ ಕನ್ನಡಮ್ಮನ ಅಧಿಕೃತ ಭಾವಚಿತ್ರವಾಗಿ ಗದಗ ಜಿಲ್ಲೆಯ ರೋಣ ತಾಲೂಕಿನ ಜಕ್ಕಲಿ ಗ್ರಾಮದ ಅಂದಾನಪ್ಪ ದೊಡ್ಡ ಮೇಟಿ ಅವರ ಮನೆಯಲ್ಲಿರುವ ತಾಯಿ ಭುವನೇಶ್ವರಿಯ ಭಾವಚಿತ್ರವನ್ನು ಸರ್ಕಾರ ಘೋಷಿಸಲಿ ಎಂಬುದು ಸಮಸ್ತ ಕನ್ನಡಿಗರ ಒಕ್ಕೊರಳಿನ ಮಾತು.

ತಾಯಿ ಭುವನೇಶ್ವರಿಯ ಚಿತ್ರವನ್ನು ಅಂದಿನ ಸರ್ಕಾರದ ಸಣ್ಣ ನೀರಾವರಿ ಸಚಿವರಾಗಿದ್ದ ದಿವಂಗತ ಅಂ–ದಾನಪ್ಪ ದೊಡ್ಡಮೇಟಿಯವರು ಕರ್ನಾಟಕ ಏಕೀಕರಣ ಹೋರಾಟದ ಸಮಯದಲ್ಲಿ ಅಖಂಡ ಕರ್ನಾಟಕದ ಪರಿಕಲ್ಪನೆಯನ್ನು ಶ್ರೀಯುತ ಸಿ. ಎನ್. ಪಾಟೀಲರ ಬಳಿ ಹೇಳಿ ಈ ತೈಲ ಚಿತ್ರರಚನೆಗೆ ಪ್ರೇರೇಪಿಸಿದ್ದರು. ಅಂದಾನಪ್ಪ ದೊಡ್ಡ ಮೇಟಿಯವರ ಆಶಯಗಳಿಗೆ ಪೂರಕವೆಂಬಂತೆ ಕನ್ನಡ ನಾಡಿನ ಹಿರಿಮೆ ಗರಿಮೆಗಳನ್ನು ಸಾರುವ ವಿವಿಧ ಚಿತ್ರಗಳನ್ನು ಒಳಗೊಂಡಂತೆ 1953ರ ಜನವರಿ 11ರಂದು ಗದುಗಿನ ಕಲಾವಿದರಾದ ಸಿ.ಎನ್. ಪಾಟೀಲರು ಆರು ಅಡಿ ಎತ್ತರದ ಕನ್ನಡ ತಾಯಿಯ ತೈಲ ಚಿತ್ರವನ್ನು ರಚಿಸಿದರು.


ಭುವನೇಶ್ವರಿ ತಾಯಿ ಇರುವ ಭಂಗಿಯೇ ಕರ್ನಾಟಕದ ನಕ್ಷೆಯಂತಿ–ದ್ದು ಎಡಗೈಯಲ್ಲಿ ಪುಸ್ತಕವನ್ನು ಹೊಂದಿದ್ದು ವಿದ್ಯೆಯ ಅಧಿದೇವತೆ ಸರಸ್ವತಿಯ ಅವತಾರವನ್ನು, ಇನ್ನೊಂದು ಕೈಯಲ್ಲಿ ಹಿಡಿದಿರುವ ತ್ರಿಶೂಲದಿಂದ ಶಕ್ತಿಯ ಅಧಿದೇವತೆ ಆದಿಶಕ್ತಿ ಎಂದು, ಮತ್ತೊಂದು ಕೈಯಲ್ಲಿ ಕಮಲವನ್ನು ಹಿಡಿದಿರುವುದರಿಂದ ಧನದ ಅಧಿದೇವತೆ ಲಕ್ಷ್ಮಿ ಎಂದು ಹೇಳಬಹುದು. ಬಿಳಿ ಸೀರೆ ಮತ್ತು ಹಸಿರು ಕುಪ್ಪಸ ಶಾಂತಿ ಮತ್ತು ಸಮೃದ್ಧಿಯ ಸಂಕೇತವನ್ನು ತೋರಿಸುತ್ತದೆ. ಸುತ್ತಲೂ ಇರುವ ಹೊಯ್ಸಳರ ಲಾಂಛನ, ಬನಶಂಕರಿ ದೇವಸ್ಥಾನ, ಮೈಸೂ–ರಿನ ಚಾಮುಂಡೇಶ್ವರಿ, ಶೃಂಗೇರಿಯ ಶಾರದಾಂಬೆ, ಚಾಲುಕ್ಯ ಶಿಲ್ಪವೈಭವದ ಶಿಲಾಬಾಲಿಕೆ, ಹಂಪಿಯ ಕಡಲೆ ಕಾಳು ಗಣಪತಿ, ಶ್ರವಣಬೆಳಗೊಳದ ಗೊಮ್ಮಟ, ಜೋಗ, ಗೋಳಗುಮ್ಮಟ, ಕರಾವಳಿ ಹಾಗೂ ಹಸಿರು ಸಿರಿಯನ್ನು ಈ ತೈಲ ವರ್ಣಚಿತ್ರವು ಒಳಗೊಂಡಿದೆ. ದೇವಿಯ ಮುಖ ದಿವ್ಯವಾದ ಸ್ವಾಭಾವಿಕ ಪ್ರಭೆಯನ್ನು ಹೊಂದಿದ್ದು ವಾಸ್ತವಿಕತೆಗೆ ಅತ್ಯಂತ ಹತ್ತಿರವಾಗಿದೆ.

ಮೊತ್ತ ಮೊದಲ ಕರ್ನಾಟಕ ಏಕೀಕರಣ ಚಳುವಳಿಗೆ ಜಕ್ಕಲಿಯ ಅನ್ನದಾನೇಶ್ವರ ಮಠದಲ್ಲಿ ಈ ಚಿತ್ರವನ್ನು ಪೂಜಿಸಿದ ಅಂದಿನ ಕರ್ನಾಟಕ ಏಕೀಕರಣ ಹೋರಾಟಗಾರರಾದ ಕೆಂಗಲ್ ಹನುಮಂತಯ್ಯನವರು ಇದೇ

ಭಾವಚಿತ್ರವನ್ನು ಗದುಗಿನಲ್ಲಿ ನಡೆದ ಕರ್ನಾಟಕ ಏಕೀಕರಣ ಹೋರಾಟದ ಮೆರವಣಿಗೆಯಲ್ಲಿ ಪ್ರದರ್ಶಿಸಿದ್ದರು. ಕರ್ನಾಟಕ ಏಕೀಕರಣ ಹೋರಾಟಕ್ಕೆ ಪ್ರೇರಣೆಯಾದ ಈ ಚಿತ್ರವು ನಮ್ಮ ನಾಡಿನ ಭವ್ಯ ಸಂಸ್ಕೃತಿಯ, ಹಿರಿಮೆ,ಗರಿಮೆಗಳ ಪ್ರತೀಕವಾಗಿದೆ.

ಅ.ನ.ಕೃಷ್ಣರಾಯರು ತಮ್ಮ 'ಕನ್ನಡಮ್ಮನ ಗುಡಿಯಲ್ಲಿ' ಎಂಬ ಕಾದಂಬರಿಯಲ್ಲಿ ಅಂದಾನಪ್ಪ ದೊಡ್ಡಮೇಟಿ ಅವರ ಮನೆಯಲ್ಲಿ ಪೂಜಿಸಲ್ಪಡುತ್ತಿರುವ ಕನ್ನಡಮ್ಮನ ಭಾವಚಿತ್ರದ ಕುರಿತು ಮಾಹಿತಿ ನೀಡಿದ್ದಾರೆ. ಕನ್ನಡದ ಹಿರಿಯ ಸಂಶೋಧಕರಾದ

ಡಾ. ಚಿದಾನಂದ ಮೂರ್ತಿಯವರು ಕೂಡ ತಮ್ಮ ಪುಸ್ತಕದಲ್ಲಿ ಈ ಚಿತ್ರವನ್ನು ಬಳಸಿದ್ದಾರೆ. ಪಾಟೀಲ್ ಪುಟ್ಟಪ್ಪ, ಡಾ.ಸಿದ್ದರಾಮ ಜಂಬಲದಿನ್ನಿ ಮುಂತಾದ ಸಾಹಿತಿಗಳು ಕೂಡ ಇದೇ ಕನ್ನಡಮ್ಮನ ಭಾವಚಿತ್ರವನ್ನು ಪೂಜಿಸಿದ್ದಾರೆ. ಗದುಗಿನ ತೋ0ಟದಾಯ9 ಮಠದಲ್ಲಿ ಕನ್ನಡದ ಸ್ವಾಮೀಜಿ ಎಂದೇ ಖ್ಯಾತರಾದ ಲಿಂ.ಜಗದ್ಗುರು ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು ಈ ಭಾವಚಿತ್ರದ ಪ್ರತಿಕೃತಿಯನ್ನು ಇರಿಸಿ ಪೂಜಿಸಿ ಅದೇ ಭಾವಚಿತ್ರವನ್ನು ಅಧಿಕೃತವಾಗಿ ಭುವನೇಶ್ವರಿಯ ಭಾವಚಿತ್ರವಾಗಿ ಘೋಷಿಸಬೇಕೆಂದು ಒತ್ತಾಯಿಸಿದ್ದರು. ಹಂಪೆಯಲ್ಲಿಯೂ ಕೂಡ ಇದೇ ಭಾವಚಿತ್ರವನ್ನು ಪೂಜಿಸಿ ಅಂದಿನ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸರವರು 'ಕರ್ನಾಟಕ' ಎಂದು ಕನ್ನಡ ನಾಡಿಗೆ ಮರುನಾಮಕರಣ ಮಾಡಿದ್ದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕೂಡ ಈ ತೈಲ ವರ್ಣ ಚಿತ್ರವನ್ನು ರಾಜ್ಯದ ಚಿನ್ಹೆಯನ್ನಾಗಿ ಮಾಡಲು ಒಪ್ಪಿಕೊಂಡಿದೆ. ಈ ಹಿಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಮನು ಬಳಿಗಾರ ರವರು ಕೂಡ ಈ ಭಾವಚಿತ್ರವನ್ನು ಕನ್ನಡಮ್ಮನ ಅಧಿಕೃತ ಭಾವಚಿತ್ರ ಎಂದು ಅಂಗೀಕ–ರಿಸಲು ಮತ್ತು ಪರಿಷತ್ತಿನ ಎಲ್ಲಾ ಘಟಕಗಳಲ್ಲೂ ಇದೇ ಭಾವಚಿತ್ರವನ್ನು ಬಳಸಲು ಹೇಳಿದ್ದರು. ಇತ್ತೀಚೆಗಷ್ಟೇ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿರುವ ನಾಡೋಜ ಡಾ.ಮಹೇಶ್ ಜೋಶಿ ಅವರು ಕೂಡ ಗದಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿ ಸ್ವೀಕಾರ ಸಮಾರಂಭಕ್ಕೂ ಮುನ್ನ ಜಕ್ಕಲಿ ಗ್ರಾಮಕ್ಕೆ ಭೇಟಿ ನೀಡಿ ತಾಯಿ ಭುವನೇಶ್ವರಿಯ ಚಿತ್ರಪಟವನ್ನು ಪೂಜಿಸಿ ನಮಸ್ಕರಿಸಿ ಅದೇ ತೈಲ



ವರ್ಣಚಿತ್ರವನ್ನು ಅಧಿಕೃತವಾಗಿ ಕನ್ನಡ ತಾಯಿ ಭುವನೇಶ್ವರಿಯ ಚಿತ್ರವಾಗಿ ಘೋಷಿಸಲು ಸರ್ಕಾರಕ್ಕೆ

ಆಗ್ರಹಿಸಿದರು.ಉತ್ತರ ಕರ್ನಾಟಕದ ಹಿರಿಯ ನಾಯಕರಾದ ಬಿ.ಎಸ್. ಹೊರಟ್ಟಿ ಅವರು ಕೂಡ ಸರ್ಕಾರಕ್ಕೆ ಪತ್ರ ಬರೆದು ದೊಡ್ಡ ಮೇಟಿ ಅವರ ಮನೆಯಲ್ಲಿರುವ ಭಾವಚಿತ್ರವೇ ಅಧಿಕೃತವಾದ ಕನ್ನಡ ತಾಯಿ ಭುವನೇಶ್ವರಿಯ ಚಿತ್ರವಾಗಬೇಕು ಎಂದು ಆಗ್ರಹಿಸಿದ್ದಾರೆ.

ಉತ್ತರ ಕರ್ನಾಟಕದ ಹಿರಿಯ ನಾಯಕರೊಬ್ಬರು ಕರ್ನಾಟಕ ಏಕೀಕರಣ ಸಮಿತಿಯ ಅಗ್ರ ಹೋರಾಟಗಾರರಾಗಿ, ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸುಮಾರು 21 ದಿನಗಳ ಮೌನ ವ್ರತ ಮತ್ತು 7 ದಿನಗಳ ಕಾಲ ಉಪವಾಸ ಆಚರಣೆ ಕೈಗೊಂಡು 'ಕನ್ನಡಿಗರೆಲ್ಲರೂ ಒಂದಾಗಬೇಕು, ಕರ್ನಾಟಕ ಏಕೀಕರಣ ಹೋರಾಟಕ್ಕೆ ಪ್ರಾತಿನಿಧಿಕ ಶಕ್ತಿಯ ರೂಪದಲ್ಲಿ ತಾಯಿ ಭುವನೇಶ್ವರಿ ಮಾತೆಯ ಚಿತ್ರವು ಹೋರಾಡುವ ಎಲ್ಲರಿಗೂ ಚೈತನ್ಯ ಶಕ್ತಿಯನ್ನು ತುಂಬಬೇಕು' ಎಂಬ ಆಶಯದೊಂದಿಗೆ ಸಮಗ್ರ ಕರ್ನಾಟಕದ ಕಲ್ಪನೆಯನ್ನು ಹೊತ್ತ ತಾಯಿ ಭುವನೇಶ್ವರಿಯ ಭಾವಚಿತ್ರವನ್ನು ರಚಿಸಲು ಪ್ರೇರೇಪಣೆ ನೀಡಿದ ಮಹನೀಯರು. 1957 ರಿಂದ ಇಂದಿನವರೆಗೂ ಅವರ ಮನೆಯಲ್ಲಿ ಪ್ರತಿದಿನ ತಪ್ಪದೇ ಕನ್ನಡಮ್ಮನ ಪೂಜೆ ಮಾಡುತ್ತಿರುವುದು ಉತ್ತರ ಕರ್ನಾಟಕದ ಜನರ ಪಾಲಿಗೆ ಹೆಗ್ಗಳಿಕೆಯ ವಿಷಯ.

ಕನ್ನಡ ನಾಡು ಒಂದು ಅಖಂಡ ಕರ್ನಾಟಕ ಎಂದು ಹಲವಾರು ನಾಯಕರು ಹಲವಾರು ಬಾರಿ ಹೇಳಿದರೂ ಅಧಿಕಾರ, ಸ್ಥಾನಮಾನ, ಸವಲತ್ತು, ಅವಕಾಶಗಳ ಪ್ರಶ್ನೆ ಬಂದಾಗ ಉತ್ತರ ಕರ್ನಾಟಕ ಮತ್ತು ಮಧ್ಯ ಕರ್ನಾಟಕಗಳು ಅನಾಸ್ಥೆ, ಅಸಡ್ಡೆ, ಅನಾದರ, ಅಭಿಮಾನ ಶೂನ್ಯತೆಯ ಕಾರಣಗಳಿಗಾಗಿ ಅವಕಾಶಗಳನ್ನು ಕಳೆದುಕೊಂಡು ಕೊರಗುತ್ತವೆ. ಗಡಿ ಭಾಗದಲ್ಲಿರುವ ಹಲವಾರು ಊರುಗಳನ್ನು ನಮ್ಮ ಅಸಡ್ಡೆಯಿಂದ ಈಗಾಗಲೇ ಕಳೆದುಕೊಂಡಿದ್ದೇವೆ ನಾವು.

ಕೇವಲ ಐದು ಜನ ತಜ್ಞರ ಸಮಿತಿಯನ್ನು ನೇಮಿಸಿ ಸರ್ಕಾರ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಭುವನೇಶ್ವರಿ ಮೂರ್ತಿಯ ಪ್ರತಿಕೃತಿಯನ್ನು ಕನ್ನಡಮ್ಮನ ಅಧಿಕೃತ ಚಿತ್ರವೆಂದು ಪರಿಗಣಿಸಲು ನಿರ್ಧರಿಸಿದ್ದು ಉತ್ತರ ಮತ್ತು ಮಧ್ಯ ಕರ್ನಾಟಕದ ಜನ–ರಿಗೆ ಆಘಾತವನ್ನು ತಂದಿದೆ. ಈ ಹಿಂದೆ ಗದುಗಿನ ಹುಯಿಲಗೋಳ ನಾರಾಯಣರಾಯರು ರಚಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡಗೀತೆಯನ್ನು ಕನ್ನಡ ನಾಡು ಉದಯವಾದ ಮೇಲೆ ಈ ಗೀತೆ ಅಪ್ರಸ್ತುತ ಎಂದು ಕೈ ಬಿಡಲಾಯಿತು. ಆದರೆ ಕನ್ನಡಮ್ಮನ ತೈಲ ವರ್ಣ ಚಿತ್ರದ ವಿಷಯದಲ್ಲಿ ಹಾಗಾಗಬಾರದು. ತಾಯಿ ಭುವನೇಶ್ವ–ರಿಯನ್ನು ಸುಮಾರು 69 ವರ್ಷಗಳಿಂದ ತಾಯಿ ಭುವನೇಶ್ವರಿಯನ್ನು ಪೂಜಿಸಿ ಆರಾಧಿಸಿದ ಏಕೀಕರಣದ ರೂವಾರಿ ಅಂದಾನಪ್ಪ ದೊಡ್ಡಮೇಟಿಯವರ ಆಶಯಕ್ಕೆ ಧಕ್ಕೆ ತರಬಾರದು.

ಅದರಗುಂಚಿ ಶಂಕರಗೌಡರು, ಹಳ್ಳಿಕೇರಿ ಗುದ್ಲೆಪ್ಪ, ಸರ್ ಸಿದ್ದಪ್ಪ ಕಂಬಳಿ, ಆರ್.ಎಚ್. ದೇಶಪಾಂಡೆ, ರಂಗರಾಜು ದಿವಾಕರ, ಶ್ರೀನಿವಾಸ್ ರಾವ್ ಕೌಜಲಗಿ, ಕೆಂಗಲ್ ಹನುಮಂತಯ್ಯ, ಶ್ರೀನಿವಾಸ್ ರಾವ್ ಮಂಗಳವಾಡೆ, ಎಸ್ ನಿಜಲಿಂಗಪ್ಪ, ಟಿ. ಮರಿಯಪ್ಪ, ಸಾಹುಕಾರ್ ಚೆನ್ನಯ್ಯ, ಹನುಮಂತಯ್ಯ, ಬಿ ವಿ ಕಕ್ಕಿಲಾಯ, ಅನ್ನದಾನಯ್ಯ ಪುರಾಣಿಕಮಠ, ಬಿ.ಡಿ. ಜತ್ತಿ ರಂತಹ ಏಕೀಕರಣದ ಅಗ್ರ ಹೋರಾಟಗಾರರು ಮತ್ತು ಕುವೆಂಪು, ಬೇಂದ್ರೆ, ಗೋಕಾಕರು, ಬೆಟಗೇರಿ ಕೃಷ್ಣಶರ್ಮ, ಗೋವಿಂದ ಪೈ, ಶಿವರಾಮ ಕಾರಂತರು, ಕಯ್ಯಾರ ಕಿಞ್ಞಣ್ಣ ರೈ,

ಅ.ನ. ಕೃಷ್ಣರಾಯರಂತಹ ಏಕೀಕರಣ ಹೋರಾಟದ ಸಾಹಿತಿಗಳು ನಮ್ಮ ನಾಡು ನುಡಿಗಾಗಿ ಕರ್ನಾಟಕದ ಏಕೀಕರಣಕ್ಕಾಗಿ ಸಲ್ಲಿಸಿರುವ ಸೇವೆಗೆ ಗೌರವ ಸಲ್ಲಿಸುವುದೇ ಆದರೆ ದಿ.ಅಂ–ದಾನಪ್ಪ ದೊಡ್ಡಮೇಟಿಯವರ ಕಲ್ಪನೆಯ ತಾಯಿ ಭುವನೇಶ್ವ–ರಿಯ ಪಟವನ್ನು ಅಧಿಕೃತ ಕನ್ನಡ ತಾಯಿ ಭುವನೇಶ್ವರಿಯ ಪಟವೆಂದು ಘೋಷಿಸಬೇಕು ಎಂಬುದು ಅಖಂಡ ಕರ್ನಾಟಕದ ಆಶಯ.

ಇತಿಹಾಸವನ್ನು ಅಧ್ಯಯನ ಮಾಡಿ, ಚಿತ್ರದ ಚಾರಿತ್ರಿಕ ಹಿನ್ನೆಲೆಯನ್ನು ಗಮನಿಸಿ ತಜ್ಞರ ಸಮಿತಿಯನ್ನು ನೇಮಿಸಿ ವರದಿ ತರಿಸಿ ಜಕ್ಕಲಿಯ ಕನ್ನಡಮ್ಮನ ತೈಲ ವರ್ಣ ಚಿತ್ರವನ್ನು ಅಧಿಕೃತ ಕರ್ನಾಟಕ ಮಾತೆಯ ಚಿತ್ರವೆಂದು ಘೋಷಿಸಲಿ ಎಂಬುದು ಮಾಜಿ ಸಚಿವ ಹೆಚ್. ಕೆ.ಪಾಟೀಲ್, ಡಿ.ಆರ್. ಪಾಟೀಲ್, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶ್ರೀ ವಿವೇಕಾನಂದ ಗೌಡ ಪಾಟೀಲ್, ಸಾಹಿತಿ ಚಂದ್ರಶೇಖರ್ ವಸ್ತ್ರದ್ ಮತ್ತು ದಿವಂಗತ ಅಂದಾನಪ್ಪ ದೊಡ್ಡ ಮೇಟಿ ಕುಟುಂಬದ ಎಲ್ಲ ಸದಸ್ಯರು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಬೈರನಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಶ್ರೀಗಳು, ಕನ್ನಡ ಸಾಹಿತ್ಯ ಪರಿಷತ್ ನ ಜಿಲ್ಲಾ ಮತ್ತು ತಾಲೂಕುವಾರು ಘಟಕಗಳು, ಬೀಚಿ ಬಳಗ, ವಿವಿಧ ಕನ್ನಡಪರ ಸಂಘಟನೆಗಳು ತಮ್ಮ ತಮ್ಮ ಭಾಗದಲ್ಲಿ ಸರ್ಕಾರಕ್ಕೆ ಈ ಕುರಿತು ಮನವಿ ಸಲ್ಲಿಸಿದ್ದು ತಮ್ಮ ಮನವಿಗೆ ಸ್ಪಂದಿಸದೆ ಹೋದರೆ ಉಗ್ರ ಹೋರಾಟ ಮಾಡುವುದಾಗಿ ತಿಳಿಸಿದ್ದಾರೆ.

'ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ' ಎಂಬುದನ್ನು ಅರಿತು.. ಸಿರಿಗನ್ನಡ ನಾಡನ್ನು, ಅದರ ಐತಿಹಾಸಿಕ ಮಹತ್ವವನ್ನು ಸಾರಿ ಹೇಳುವ ದಿವಂಗತ ಅಂ–ದಾನಪ್ಪ ದೊಡ್ಡಮೇಟಿ ಅವರ ಕಲ್ಪನೆಯ, ಸಿ. ಎನ್. ಪಾಟೀಲ್ ವಿರಚಿತ ಭುವನೇಶ್ವರಿಯ ತೈಲ ವರ್ಣ ಚಿತ್ರವನ್ನು ಅಧಿಕೃತ ಕನ್ನಡ ಮಾತೆಯ ಚಿತ್ರವೆಂದು ಘೋಷಿಸಬೇಕಾಗಿ ಸರ್ಕಾರವನ್ನು ಒತ್ತಾಯಿಸುವ ಈ ಅಭಿಯಾನದಲ್ಲಿ ಅಖಂಡ ಕರ್ನಾಟಕದ ಸರ್ವ ಜನತೆಯು ಪಾಲ್ಗೊಂಡು ಜಯ ಸಾಧಿಸಬೇಕು ಎಂಬ ಆಶಯ ಸಮಗ್ರ ಕರ್ನಾಟಕದ ಜನರದು.

ಬಿಜೆಪಿ ಜಿಲ್ಲಾಧ್ಯಕ್ಷ ಕೂಚಬಾಳ ಸುದ್ದಿಗೋಷ್ಠಿ । ಜಿಲ್ಲೆಯ ರೈತರ ಸಂಕಷ್ಟ ಆಲಿಕೆ

# ನ.4ರಂದು ಬಿಜೆಪಿ ರಾಜ್ಯಾಧ್ಯಕ್ಷ ಕಟೀಲ್ ತಂಡದಿಂದ ಬರ ಅಧ್ಯಯನ



**ಉದಯರಶ್ಮಿ ನ್ಯೂಸ್**ವಿ–ಜಯಪುರ: ಜಿಲ್ಲೆಯಲ್ಲಿ ಉಂಟಾಗಿರುವ ಬರ ಅಧ್ಯಯನಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನಕುಮಾರ ಕಟೀಲ್ ನೇತೃತ್ವದ ತಂಡ ನ. 4ರಂದು ಭೇಟಿ ನೀಡಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಎಸ್. ಪಾಟೀಲ ಕೂಚಬಾಳ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ತಂಡದಲ್ಲಿ ಸಂಸದರಾದ ರಮೇಶ ಜಿಗಜಿಣಗಿ, ಪಿ. ಸಿ. ಗದ್ದಿಗೌಡರ, ಶಾಸಕ ಬಸನಗೌಡ ಪಾಟೀಲ ಯತ್ನಾಳ, ಮಾಜಿ ಸಚಿವ ಮುರುಗೇಶ ನಿರಾಣಿ, ಮಾಜಿ ಶಾಸಕರಾದ ಪಿ. ರಾಜೀವ, ವೀರಣ್ಣ ಚರಂತಿಮಠ, ಎ. ಎಸ್. ಪಾಟೀಲ ನಡಹಳ್ಳಿ, ಸಿದ್ದು ಸವದಿ ಇರಲಿದ್ದಾರೆ ಎಂದು ತಿಳಿಸಿದರು.

ಈ ತಂಡವು ನ. 4 ರಂದು ಬೆ. 9 ರಿಂದ ಮ. 3ರ ವರೆಗೆ ಜಿಲ್ಲೆಯ ತಿಕೋಟಾ, ನಾಗಠಾಣ ಹಾಗೂ ಕೊಲ್ಹಾರ ತಾಲೂಕುಗಳಿಗೆ ಭೇಟಿ ನೀಡಿ, ರೈತರ ಸಂಕಷ್ಟವನ್ನು ಆಲಿಸಲಿದೆ. ರಾಜ್ಯದಲ್ಲಿ ಭೀಕರ ಬರದಿಂದಾಗಿ ರೈತರು ಕುಗ್ಗಿ ಹೋಗಿದ್ದಾರೆ. ಅನ್ನದಾತರ ಸಮಸ್ಯೆಯನ್ನು ಕೇಳಲು ನಳಿನಕುಮಾರ್ ಕಟೀಲ, ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ, ಶಾಸಕರಾದ ಡಾ. ಸಿ. ಎನ್. ಅಶ್ವತ್ಥನಾರಾಯಣ, ಬಸನಗೌಡ ಪಾಟೀಲ ಯತ್ನಾಳ ಅವರ ನೇತೃತ್ವದಲ್ಲಿ ಬರ ಅಧ್ಯಯನ ತಂಡಗಳನ್ನು ರಚನೆ ಮಾಡಲಾಗಿದೆ. ಈ ತಂಡಗಳು ರಾಜ್ಯದ ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಿ ರೈತರ ಪರಿಸ್ಥಿತಿ ಅಧ್ಯಯನ ನಡೆಸಲಿದ್ದಾರೆ. ಬಳಿಕ ಸರಕಾರಕ್ಕೆ ವರದಿ ಸಲ್ಲಿಸಲಿದ್ದಾರೆ ಎಂದು ಅವರು ತಿಳಿಸಿದರು.

ರಾಜ್ಯಾದ್ಯಂತ ಭೀಕರ ಬರ ಪರಿಸ್ಥಿತಿ ದುರಾಗಿದ್ದರೂ ರಾಜ್ಯ ಸರಕಾರ ಪರಿಹಾರ ಕಾಮಗಾ–ರಿಗಳನ್ನು ಕೈಗೊಳ್ಳದೇ ಕಣ್ಣುಮುಚ್ಚಿ ಕುಳಿತಿದೆ. ಈ ಹಿಂದೆ ಬಿ. ಎಸ್. ಯಡಿಯೂರಪ್ಪ ಸಿಎಂ ಆಗಿದ್ದಾಗ ಅತಿವೃಷ್ಟಿ ಉಂಟಾಗಿತ್ತು. ಅಂದು ಯಡಿಯೂರಪ್ಪ ಎನ್ ಡಿ ಆರ್ ಎಫ್ ಮಾರ್ಗಸೂಚಿ ಬದಿಗೊತ್ತಿ ಎರಡು ಪಟ್ಟು ಪರಿಹಾರ ನೀಡುವ ಮೂಲಕ ಸ್ಪಂದಿಸಿದ್ದರು. ಈ ಮಾದ–ರಿಯಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಪರಿಹಾರ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಚಂದ್ರಶೇಖರ ಕವಟಗಿ, ಸಂಜಯ ಐಹೊಳೆ, ಸುರೇಶ ಬಿರಾದಾರ, ಮಲ್ಲಿಕಾರ್ಜುನ ಜೋಗೂರ, ಬಸವರಾಜ ಬಿರಾದಾರ, ಶಿವರುದ್ರ ಬಾಗಲಕೋಟ, ಸಂಜಯ ಪಾಟೀಲ ಕನಮಡಿ, ವಿಜಯ ಜೋಶಿ ಉಪಸ್ಥಿತರಿದ್ದರು

# ಮುದ್ದೇಬಿಹಾಳ: ಕನ್ನಡ ರಾಜ್ಯೋತ್ಸವ ಸಂಭ್ರಮ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ದೇಶದ ಉಜ್ವಲ ಭವಿಷ್ಯದ ಹಿತದೃಷ್ಟಿಯಿಂದ ಹಿಂದೆ ಏನು ಅಭಿವೃದ್ಧಿ ಮಾಡಿದ್ದೇವೆ, ಮುಂದೆ ಏನೆಲ್ಲ ಮಾಡಬೇಕು ಎಂಬ ಬಗ್ಗೆ ಚಿಂತನೆ ಮಾಡಿ ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಹೆಜ್ಜೆಗಳನ್ನು ಇಟ್ಟಲ್ಲಿ ಜಗತ್ತಿನಲ್ಲಿಯೇ ತಲೆ ಎತ್ತಿ ನಿಲ್ಲುವ ರಾಜ್ಯ ಕರ್ನಾಟಕ ವಾಗುತ್ತದೆ ಎಂದು ಶಾಸಕ ಸಿ.ಎಸ್.ನಾಡಗೌಡ ಅಪ್ಪಾಜಿ ಹೇಳಿದರು.

ಪಟ್ಟಣದ ತಹಶೀಲ್ದಾರ ಕಚೇರಿಯ ಆವರಣದಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ತಾಲೂಕಾಡಳಿತದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಬಾರಿ ಬರಗಾಲ ಘೋಷಣೆಯಾಗಿದೆ. ಮಳೆಯಾಗದೇ ಬೆಳೆ ಇಲ್ಲದೇ ರೈತರು ಪರದಾಡುವಂತಾಗಿದೆ. ಸರ್ಕಾರಕ್ಕೆ ಏನು ತೊಂದರೆ ಇದೆ ಅಂತಾರೆ. ಆದರೆ ತೊಂದರೆ ಬಗ್ಗೆ ನಮಗೆ ಮಾತ್ರ ಗೊತ್ತು. ಹಿಂದಿನ ಸರ್ಕಾರಗಳು ಅಶಿಸ್ತಿನಿಂದ ಮಾಡಿದ ಕಾರ್ಯಗಳನ್ನು ನಾವು ಸರಿಪಡಿಸಬೇಕು ಎಂದರು.

ತಹಶೀಲ್ದಾರ ಬಲರಾಮ ಕಟ್ಟಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಬಸವರಾಜ ಹಂಚಲಿ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಸಿಪಿಐ ಮಲ್ಲಿಕಾರ್ಜುನ ತುಳಸಿಗೇರಿ, ಪಿಎಸ್ಐ ಸಂಜೀವ ತಿಪರೆಡ್ಡಿ, ಕೃಷಿ ಅಧಿಕಾರಿ ಎಸ್.ಆರ್.ಕಟ್ಟಿಮನಿ, ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಸದಸ್ಯ ಚನ್ನಪ್ಪ ಕಂಠಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ, ಕನ್ನಡಪರ ಸಂಘಟನೆಗಳ ಹೋರಾಟಗಾರರಾದ ಮಂಜುನಾಥ ಕೊಪ್ಪ, ಮಲ್ಲು ಗಂಗನಗೌಡರ, ಹುಸೇನ ಮುಲ್ಲಾ, ರಾಜುಗೌಡ ತುಂಬಗಿ, ಮಹಾಂತೇಶ ಬೂದಿಹಾಳಮಠ ಸೇರಿದಂತೆ ಮತ್ತೀತರರು ಇದ್ದರು.

ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಯು.ಬಿ.ಧರಿಕಾರ ಸ್ವಾಗತಿಸಿದರು. ಗುಂಡು ಚೌವ್ಹಾಣ ನಿರ್ವಹಿಸಿದರು.

ನಾಡಧ್ವಜ ಪ್ರದರ್ಶನ.

ಸ್ಥಬ್ಧ ಚಿತ್ರ ಮೆರವಣಿಗೆಯ ವೇಳೆ ಕನ್ನಡಾಭಿಮಾನಿ ವಿನೋದ ಪಟಗಾರ ನೇತೃತ್ವದ ತಂಡ 200ಮೀ ಉದ್ದದ ಕನ್ನಡ ನಾಡ ಧ್ವಜ ಪ್ರದರ್ಶಿಸಿ ಗಮನ ಸೆಳೆದರು.

ಸ್ಥಬ್ಧಚಿತ್ರ ಪ್ರದರ್ಶನದಲ್ಲಿ ಪಟ್ಟಣದ ಆಕ್ಸಫರ್ಡ ಇಂಗ್ಲೀಷ ಶಾಲೆಯ ಮಾಸ್ತಿ ವೆಂಕಟೇಶ ಅಯ್ಯಂಗಾರ ಪ್ರಥಮ, ಪ್ರಾಥ–ರ್ನಾ ವಿದ್ಯಾಮಂದಿರ ಶಾಲೆಯ ಭುವನೇಶ್ವರ ದೇವಿ ದ್ವಿತೀಯ ಹಾಗೂ ಶಾರದಾ ವಿದ್ಯಾ ಮಂದಿರದ ವಿ.ಕೃ. ಗೋಕಾಕ ತೃತೀಯ ಸ್ಥಾನ ಪಡೆದು ಸಂಭ್ರಮಿಸಿದರು.

ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

# ಚಂದಕ್ಕಿಂತ ಚಂದ ನನ್ನೂರು..

– –ಜಯಶ್ರೀ ಆಲೂರು
("ನಮ್ಮ ಕಥಾ ಅರಮನೆ" ಬರಹಗಾರರು)



ಅಂದದೂರು ಆಲೂರು
ಚಂದದಲ್ಲಿ ಚೆಂದ ನನ್ನೂರು
ಹರಿದಿದೆ ಸುವರ್ಣಾವತಿ
ಇಲ್ಲದಿರೆ ನಮಗೆ ಅಧೋಗತಿ

ಬಾಳೆ ತೆಂಗು ಅಡಿಕೆ ಸೊಗಸು
ಬಸಿರು ತುಂಬಿ ನಿಂತ ಹಲಸು
ಮಾವು ಸೀಬೆ ಬೇಲ ನೇರಳೆ
ನೆಲ್ಲಿ ಕಡಲೆ ನಿಂಬೆ ವೀಳ್ಯದೆಲೆ

ಹಸಿರು ಹುಲ್ಲುಹಾಸಿ ಭತ್ತ
ಜೋಳ ರಾಗಿ ಕಡಲೆ ಸುತ್ತ
ಮಲ್ಲೆ ಜಾಜಿ ಇರುವಂತಿಗೆ
ಕಂಪ ನೀಡುವ ತೋಟ ಸಂಪಿಗೆ

ಎಲ್ಲ ಮತದ ಜನರ ಊರು
ಎಲ್ಲರಿಗೊಂದೇ ದೇವರು
ಊರ ಮುಂದೆ ಕುಳಿತ ಗಣಪರು
ವರ್ಷಕ್ಕೊಮ್ಮೆ ಸೇರಿ ನಲಿವರು



ಚಾಮರಾಜ ನಗರ ಜಿಲ್ಲೆ
ಸೂಲಂಗಿ ಬಿಟ್ಟ ಕಬ್ಬು ಜಲ್ಲೆ
ಪ್ರಸಿದ್ಧಿ ಹೋಟೆಲ್ ಪಚ್ಚಪ್ಪ
ಬಂದು ದೋಸೆ ಸವಿಯಪ್ಪ

ಬೆಟ್ಟದ ಮೇಗಣ ಬಿಳಿಗಿರಿ ರಂಗ
ನರ್ತಿಸುವನು ಸೋಲಿಗರ ಸಂಗ
ಚಿಕ್ಕ ಹೊಳೆ ಅಣೆಕಟ್ಟು ನೋಡುಬಾರ
ಪರಸೆಯ ಏಳುಮಲೆಯ ಮಹದೇಶ್ವರ

# ಡಾ.ಸುರೇಖಾ ರಾಠೋಡಗೆ ರಾಜ್ಯೋತ್ಸವ ಪ್ರಶಸ್ತಿ

**ಉದಯರಶ್ಮಿ ನ್ಯೂಸ್**



ವಿಜಯಪುರ: ನಗರದ ಸಮಾಜ ಸೇವಕಿ, ಸಾಹಿತಿ ಡಾ.ಸುರೇಖಾ ರಾಠೋಡ ಅವರಿಗೆ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕವು 2023ನೇ ಸಾಲಿನ "ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ" ನೀಡಿ ಗೌರವಿಸಿತು.

ನಗರದ ಲಾಲಬಹದ್ದೂರ ಶಾಸ್ತ್ರಿ ಮಾರುಕಟ್ಟೆ ಪ್ರಾಂಗಣದಲ್ಲಿ ಬುಧವಾರ ಸಂಜೆ ಕರವೇ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಡಾ.ಸುರೇಖಾ ರಾಠೋಡ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ ಎಂ.ಬಿ.ಪಾಟೀಲ ಅವರು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಕರವೇ ಜಿಲ್ಲಾಧ್ಯಕ್ಷ ಎಂ.ಸಿ.ಮುಲ್ಲಾ, ಪ್ರ.ಕಾರ್ಯದರ್ಶಿ ಸುರೇಶ ಬಿಜಾಪುರ, ನಗರ ಘಟಕ ಅಧ್ಯಕ್ಷ ಫಯಾಜ ಕಲಾದಗಿ, ನ್ಯಾಯವಾದಿ ನಾಗರಾಜ ಲಂಬು, ಶ್ರೀಗಳು, ಮೌಲ್ವಿಗಳು, ಪಾದ್ರಿಗಳು ಸೇರಿದಂತೆ ಕರವೇ ಪದಾಧಿಕಾರಿಗಳು, ಕಾರ್ಯಕರ್ತರು ಇದ್ದರು.

# "ಇದೇ ನಾಡು ಇದೇ ಭಾಷೆ ಎಂದೆಂದೂ ನಮ್ಮದಾಗಿರಲಿ"



## ಭಾವರಶ್ಮಿ

– ಧನು
("ನಮ್ಮ ಕಥಾ ಅರಮನೆ" ಬರಹಗಾರರು)
ಉದಯರಶ್ಮಿ ದಿನಪತ್ರಿಕೆ

ಯಾರೇ ಆಗಲಿ ತಮ್ಮ ಬಾಲ್ಯವನ್ನು ಮರೆಯಲು ಸಾಧ್ಯವೇ? ಖಂಡಿತಾ ಇಲ್ಲ. ಆದ್ದರಿಂದಲೇ ತಾಯ್ನುಡಿ ತಾಯ್ನೆಲದ ಅಭಿಮಾನವನ್ನು ಮಕ್ಕಳಿಗೆ ಬಾಲ್ಯದಿಂದಲೇ ಬೆಳೆಸಬೇಕು. ನಮ್ಮ ನೆಲದ ಇತಿಹಾಸ, ಅದರ ವೈಭವವನ್ನು ಮಕ್ಕಳ ಮನಮುಟ್ಟುವಂತೆ ಹೇಳಿಕೊಟ್ಟಾಗ, ಅವರಲ್ಲಿ ತಮ್ಮ ಮಾತೃಭಾಷೆ ಹಾಗೂ ಹುಟ್ಟಿದ ನೆಲದ ಮೇಲಿನ ಆಕಾಂಕ್ಷೆ ಹೆಚ್ಚಾಗುತ್ತದೆ. ಅಂತಹ ಮಕ್ಕಳು ಬೆಳೆದಂತೆ, ತಾವು ಎಲ್ಲೇ ವಾಸಿಸಲಿ ಅಥವಾ ಯಾವುದೇ ಭಾಷೆಯನ್ನು ಕಲಿಯುತ್ತಿರಲಿ, ತಾವು ಕಲಿತ, ಹುಟ್ಟಿ ಬೆಳೆದ ನಾಡು ಅದರ ಹೆಮ್ಮೆಯನ್ನು ಎಂದಾದರೊಮ್ಮೆ ನೆನಪಿಸಿಕೊಳ್ಳದೇ ಇರಲಾರರು. ಇನ್ನೇನು ನಮ್ಮ ಕರುನಾಡಿನ ಹಬ್ಬಕ್ಕೆ ಕೆಲವೇ ಕ್ಷಣಗಳು ಇವೆ. ನಾವು ಕೇವಲ ಇಂತಹ ಸಂದರ್ಭದಲ್ಲಿ ಮಾತ್ರ ಕನ್ನಡ ಭಾಷೆಯ ಬಗ್ಗೆ ಮಾತನಾಡುತ್ತೇವೆ. ಆದರಿದು ವರ್ಷಪೂರ್ತಿ ಇರಬೇಕು ಅನ್ನುವ ಅರಿವು ಯಾರಿಗೂ ಬಹುಶಃ ಬರಲಾರದೇನೋ.

ಶ್ರೀಗಂಧದ ನಾಡು, ಕವಿಗಳ ಬೀಡು, ಸಂಸ್ಕೃತಿಯ ಗೂಡು ಅದುವೇ ನಮ್ಮ ಈ ಚೆಲುವ ಕನ್ನಡ ನಾಡು. ನಿಸರ್ಗ ಸೌಂದರ್ಯಕ್ಕೆ ಹೆಸರಾದ ಬೀಡು. ನಮ್ಮ ಕರುನಾಡು ಸಹನೆ, ಶಾಂತಿ, ಸಾಮರಸ್ಯ, ಸಮೃದ್ಧಿಯಿಂದ ಬಾಳಲು ಬೇಕಾದುದೆಲ್ಲವನ್ನೂ ಕೊಟ್ಟಿದೆ. ಇಲ್ಲಿ ಹಲವು ಧರ್ಮದ ಅನುಯಾಯಿಗಳನ್ನು ಕಾಣುತ್ತೇವೆ. ಇದು ನಾಡಿನ ಸಮಗ್ರತೆಗೆ, ಭಾವೈಕ್ಯತೆಗೆ ನೆರವಾಗುತ್ತದೆ. ಈ ನಮ್ಮ ನಾಡು–ನುಡಿಯ ಬಗ್ಗೆ ಅವಲೋಕನ ಮಾಡಿದಾಗ ಬಹಳ ಎತ್ತರವಾಗಿ ಕಾಣುತ್ತದೆ. ನಮ್ಮ ಕನ್ನಡನಾಡಿನ ಇತಿಹಾಸದ ಬಗ್ಗೆ ಅಧ್ಯಯನ ಮಾಡಿದರೆ ಸಾಹಿತ್ಯ, ಶಿಲ್ಪಕಲೆ, ಉಡುಗೆ–ತೊಡುಗೆ, ಸಂಸ್ಕೃತಿ, ಭಾಷೆ, ಸಂಗೀತ ಮುಂತಾದವುಗಳ ವೈಭವವನ್ನು ಕಾಣಬಹುದು.

ಕನ್ನಡ ಸಾಹಿತ್ಯಕ್ಕೆ ಶತಮಾನಗಳ ಇತಿಹಾಸವಿದೆ. 'ರವಿ ಕಾಣದ್ದನ್ನು ಕವಿ ಕಂಡ' ಎಂಬಂತೆ, ನಮ್ಮ ಕನ್ನಡದ ಕವಿಗಳು ಮುಟ್ಟದ ವಸ್ತುವಿಲ್ಲ ಎನ್ನಬಹುದು. ಪಂಪ, ರನ್ನ, ಸರ್ವಜ್ಞ, ಬಸವಣ್ಣ, ಅಕ್ಕಮಹಾದೇವಿಯಿಂದ ಹಿಡಿದು, ರಾಜ ಮಹಾರಾಜರುಗಳು ಕೂಡ ನಮ್ಮ ಕನ್ನಡ ಸಾಹಿತ್ಯಕ್ಕೆ ಅತ್ಯಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಕುವೆಂಪು, ದ.ರಾ. ಬೇಂದ್ರೆ, ಡಿ ವಿ ಜಿ, ರಾಜರತ್ನಂ, ನಿಸಾರ್ ಅಹಮದ್, ಶಿವರಾಮಕಾರಂತ, ಹೀಗೇ ಸಾಲು ಸಾಲು ಕವಿಗಳು ನಮ್ಮ ಹೆಮ್ಮೆ. ರಾಜರ ಆಳ್ವಿಕೆ, ಶತಶತಮಾನಗಳ ಕಾಲದ ಹಾಗೂ ಆಧುನಿಕ ಯುಗದ ಕವಿಗಳು ನಮ್ಮ ಸಾಂಸ್ಕೃತಿಕ, ಸಾಹಿತ್ಯ, ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ. ಇವರೆಲ್ಲರ ಅದ್ಭುತ ಕೊಡುಗೆಗಳಿಂದಲೇ ನಮ್ಮಕನ್ನಡ ಸಾಹಿತ್ಯದ ಬುಟ್ಟಿಗೆ ಇದುವರೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ. ಇದು ಭಾರತೀಯ ಭಾಷೆಗಳಲ್ಲಿಯೇ ಎರಡನೆಯ ಸ್ಥಾನ ಎಂಬ ಹೆಮ್ಮೆ ನಮಗೆ.

ಕೇವಲ ಸಾಹಿತ್ಯದಲ್ಲಿ ಅಷ್ಟೇ ಅಲ್ಲದೆ ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಬೌದ್ಧಿಕ, ಸಿನಿಮಾ ಹಾಗೂ ಇತರೆ ಕ್ಷೇತ್ರಗಳಲ್ಲೂ ಕನ್ನಡದ ಜನ ತಮ್ಮ ಪ್ರತಿಭೆಗಳನ್ನು ಮೆರೆದಿದ್ದಾರೆ. ನಮ್ಮ ಕರುನಾಡಿನ ಜನರು ಶಿಕ್ಷಣ ಕ್ಷೇತ್ರದಲ್ಲೂ ಮುಂದೆ ಇರುತ್ತಾರೆ. ಇಲ್ಲಿನ ಹಲವಾರು ಪ್ರಸಿದ್ಧ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡಲು ದೇಶ ವಿದೇಶಗಳಿಂದ ಕನ್ನಡನಾಡಿಗೆ ವಿದ್ಯಾರ್ಥಿಗಳು ಬರುತ್ತಾರೆ. ಹಲವಾರು ವೀರರಿಗೆ, ಬುದ್ಧಿಜೀವಿಗಳಿಗೆ, ಸಾಧುಸಂತರಿಗೆ, ಸಾಹಸಿಗಳಿಗೆ ಜನ್ಮ ನೀಡಿದ ಭೂಮಿ ನಮ್ಮ ಕರುನಾಡು.

ನಮ್ಮ ಕರ್ನಾಟಕದಲ್ಲಿ ಹಲವಾರು ಪ್ರೇಕ್ಷಣೀಯ ಸ್ಥಳಗಳಿವೆ. ವಾಸ್ತುಶಿಲ್ಪಕ್ಕೆ ಹೆಸರಾದ ಬೇಲೂರು, ಹಳೇಬೀಡಿನ ಶಿಲ್ಪಕಲೆಗಳು, ಮೈಸೂರಿನ ಅರಮನೆ, ಉದ್ಯಾನವನಗಳು, ಮೃಗಾಲಯಗಳು, ಜೋಗ್ ನಂತಹ ಮನಮೋಹಕ ಜಲಪಾತಗಳು, ಸುಂದರ ದೃಶ್ಯಾವಳಿಗಳನ್ನು ವೀಕ್ಷಿಸಲು ಬೆಟ್ಟಗುಡ್ಡಗಳು, ಕಡಲತೀರಗಳು, ದಟ್ಟಾರಣ್ಯಗಳು ಹೀಗೆ ಅನೇಕ ತಾಣಗಳನ್ನು ನೋಡಲು ವಿಶ್ವಾದಾದ್ಯಂತ ಪ್ರವಾಸಿಗರು ಬಂದು ಹೋಗುತ್ತಾರೆ. ಕರ್ನಾಟಕದ ಪ್ರಮುಖ ಬೆಳೆಗಳು ಭತ್ತ, ರಾಗಿ, ಎಳ್ಳು, ಕಾಫಿ, ಏಲಕ್ಕಿ, ಕಿತ್ತಳೆ, ಹತ್ತಿ, ಕಬ್ಬು, ತೆಂಗು, ಬಾಳೆ, ಮಾವು, ಹಲಸು ಇತ್ಯಾದಿಗಳು. ಇಲ್ಲಿನ ಮಣ್ಣು ವೈವಿಧ್ಯಮಯವಾಗಿದ್ದು ವಿಧವಿಧವಾದ ಬೆಳೆಗಳನ್ನು ಬೆಳೆಯಲು ಯೋಗ್ಯವಾಗಿದೆ. ಕರ್ನಾಟಕದಲ್ಲಿ ಹಲವಾರು ನದಿಗಳಿದ್ದು, ನೀರನ್ನು ರೈತರ ಬೆಳೆಗಳಿಗೆ ಹಾಗೂ ಕುಡಿಯಲು ಉಪಯೋಗಿಸುತ್ತಾರೆ. ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ, ಮಳೆಗಾಲದಲ್ಲಿ ನೀರನ್ನು ಸಂಗ್ರಹಿಸಿಕೊಂಡು ವರ್ಷಪೂರ್ತಿ ಉಪಯೋಗಿಸಲು ಸಾಧ್ಯವಾಗುವಂತೆ ನೋಡಿಕೊಳ್ಳುತ್ತಾರೆ. ನದಿಯ ನೀರಿನಿಂದ ವಿದ್ಯುಚ್ಛಕ್ತಿಯನ್ನು ತಯಾರಿಸುವ ಕೇಂದ್ರಗಳನ್ನು ನಮ್ಮ ಈ ಕರುನಾಡು ಹೊಂದಿದೆ.

ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಒಳಗಾಗಿ ಕನ್ನಡ ಸಾಹಿತ್ಯ ಹಾಗೂ ಭಾಷೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವುದಂತೂ ಸತ್ಯ. ಕೇವಲ ವರ್ಷಕ್ಕೊಮ್ಮೆ ಕನ್ನಡದ ಹಬ್ಬ ಆಚರಿಸಿದರೆ ನಮ್ಮ ಕನ್ನಡವನ್ನು ಉಳಿಸಿ ಬೆಳೆಸಲು ಸಾಧ್ಯವಿಲ್ಲ. ಅದು ಪ್ರತಿದಿನ, ಪ್ರತಿಕ್ಷಣ, ಪ್ರತಿಮನೆಯಲ್ಲೂ ಪ್ರತಿಯೊಬ್ಬರ ಕರ್ತವ್ಯವಾದರೆ ಮಾತ್ರ ಚೆಲುವಿನ ಕನ್ನಡವನ್ನು ಮಕ್ಕಳಾದ ನಾವೇ ಉಳಿಸಲು ಸಾಧ್ಯವಿದೆ. ವಿವಿಧ ರಾಜರ ಆಳ್ವಿಕೆಯಲ್ಲಿ ಹ–ರಿದು ಹಂಚಿಹೋಗಿದ್ದ ನೆಲ, ಜಲ, ಭಾಷೆಯನ್ನು ಒಂದುಗೂಡಿಸಿದರು. ಈಗ ಅದನ್ನು ನಾವು ಉಳಿಸದಿದ್ದರೆ ಕನ್ನಡವನ್ನು ರಕ್ಷಿಸುವವರು ಯಾರು? ನಮ್ಮ ಕನ್ನಡ ತಾಯಿ ನಮ್ಮ ನಿರ್ಲಕ್ಷ್ಯದಿಂದ ಕೊರಗಿ ನಮ್ಮ ಕಣ್ಣೆದುರೇ ನಶಿಸುತ್ತಿರುವುದು ಕಂಡೂ ಕಾಣದಂತಿದ್ದೇವೆ. ಕನ್ನಡವು ಈ ಪರಿಸ್ಥಿತಿಗೆ ಬರಲು ನಾವೆಲ್ಲರೂ ಕಾರಣಕರ್ತರೇ ಅಲ್ಲವೇ? ಈಗ ಹಿಂದೆ ಹೋಗಿ ಮಾಡಿದ ತಪ್ಪನ್ನು ಸರಿಪಡಿಸಲು ಸಾಧ್ಯವಿಲ್ಲ . ಆದ–'ರೇನಂತೆ ಭವಿಷ್ಯದಲ್ಲಿ ನಮ್ಮ ನುಡಿಯ ಉಳಿವಿಗಾಗಿ ನಮ್ಮೆಲ್ಲರ ಪ್ರಯತ್ನ ಸಹಕಾರ ಅತೀ ಅವಶ್ಯಕ. ನಮ್ಮ ಮುಂದಿನ ಪೀಳಿಗೆಗೆ ಇದರ ಅರಿವು ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರತಿಯೊಬ್ಬ ಕನ್ನಡಿಗನೂ ತಮ್ಮ ತಮ್ಮ ಮನೆಗಳಲ್ಲಿ ಕನ್ನಡದಲ್ಲೇ ಮಾತನಾಡಿದಾಗ ಮಕ್ಕಳಲ್ಲೂ ಕನ್ನಡಾಭಿಮಾನ ಜಾಗೃತಗೊಳ್ಳುತ್ತದೆ ಹಾಗೂ ಕನ್ನಡದ ಬಗೆಗಿನ ಜ್ಞಾನ ವೃದ್ಧಿಯಾಗಿ, ಅವರ ಮನಃಪಟಲದಲ್ಲಿ ಉಳಿಯುತ್ತದೆ. ಅದನ್ನೇ ಮಕ್ಕಳು ತಮ್ಮ ಮುಂದಿನ ಪೀಳಿಗೆಗೂ ತೆಗೆದುಕೊಂಡು ಹೋಗಲು ಸಹಾಯವಾಗುತ್ತದೆ. ನಾವೇ ಇಂದು ಮಕ್ಕಳಿಗೆ ಅಂಗ್ಲಭಾಷೆಯಲ್ಲಿ ಮಾತನಾಡಲು ಪ್ರೋತ್ಸಾಹಿಸಿ, ಅವರು ಬೆಳೆದಂತೆ ಕನ್ನಡದ ಜ್ಞಾನ ಅವರಿಗೆ ಇಲ್ಲದೇ ಹೋದರೆ ಕನ್ನಡದ ವಿಕಾಸ ಹಾಗೂ ಕನ್ನಡದ ಮೇಲಿನ ಪ್ರೀತಿ ಹೇಗೆ ಸಾಧ್ಯ ಅಲ್ಲವೇ?

ಪ್ರೀತಿ ಇರಲಿ ಅನ್ಯಭಾಷೆಯಲಿ
ಮರೆಯದಿರು ಕನ್ನಡ ಭಾಷೆ
ನುಡಿದು ಕನ್ನಡ ಬೆಳೆಸು ಎತ್ತರಕ್ಕೆ
ಜಗದಲ್ಲಿ ಮೊಳಗಲಿ
ಕನ್ನಡ ಕನ್ನಡ

ಕರುನಾಡು ಉಳಿಯಬೇಕೆಂದರೆ ಭಾಷೆ ಉಳಿಯಬೇಕು, ಭಾಷೆ ಉಳಿಯಬೇಕೆಂದರೆ ನಾವು ಪಡೆದುಕೊಂಡ ಜ್ಞಾನವನ್ನು ಕನ್ನಡಕ್ಕಾಗಿ ಮೀಸಲಿಟ್ಟು ಇತರರಿಗೆ ಅದರ ಅರಿವನ್ನು ಮೂಡಿಸಬೇಕು. ನಮ್ಮೆಲ್ಲರ ಸತತ ಪ್ರಯತ್ನದಿಂದ, ಅಳಿಯುತ್ತಿರುವ ನಮ್ಮ ಕನ್ನಡ ನುಡಿಯು ಉಳಿಯುವ ಆಶಯವಿದೆ. ನಮ್ಮ ಭಾಷೆಯನ್ನು ಮೊದಲು ಉಳಿಸಿ ಬೆಳೆಸಿ ನಂತರ ಬೇರೆ ಭಾಷೆಯನ್ನು ಪ್ರೀತಿಸಬೇಕು. ನಮ್ಮ ಕನ್ನಡನಾಡು, ಕನ್ನಡ ಭಾಷೆ ಎಂದೆಂದೂ ನಮ್ಮದಾಗಿರಲಿ ಎನ್ನುವ ಧ್ಯೇಯವನ್ನು ಅರಿತು ಮುನ್ನಡೆಯಬೇಕಾಗಿದೆ.

